ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ತಮಿಳುನಾಡಿನ ಟಿವಿಕೆ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗಿರುವ ನಟ ವಿಜಯ್ ಅವರು ಮೇ 7 ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

06 ಮೇ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 56 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಅಡಿಕೆ ಬೆಳೆಯ ಭವಿಷ್ಯ ಮತ್ತು ವಾಸ್ತವ » 2



4 ಗಂಟೆ ನಿರಂತರ 3 ಫೇಸ್ ವಿದ್ಯುತ್ ಸರಬರಾಜು ಮಾಡಿ » 3



ಮತ್ತೆ ಭುಗಿಲೆದ್ದ ಸಂಘರ್ಷ: ಇರಾನ್ ಕ್ಷಿಪಣಿ ದಾಳಿ » 4

# ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ: ಮಮತಾ ಹಠ

## ಪಿತೂರಿಯಿಂದ ಸೋತಿದ್ದೇವೆಂದು ಪ್ರತಿಪಾದನೆ | ರಾಜ್ಯಪಾಲರ ಮಧ್ಯ ಪ್ರವೇಶ ಸಾಧ್ಯತೆ

• ಪ್ರಜೋದಯ ವರದಿ

**ನವದೆಹಲಿ:** ವಿಧಾನಸಭಾ ಚುನಾವಣೆ ಫಲಿತಾಂಶವನ್ನು ಒಪ್ಪದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಬೇಕಿದ್ದರೆ ಅವರು ಸಾಂವಿಧಾನಿಕ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಬಹುದೆಂದು ಕೇಂದ್ರ ಸರ್ಕಾರಕ್ಕೆ ಸವಾಲೆಸೆದಿದ್ದಾರೆ.

ಕೋಲ್ಕತ್ತಾದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಜನಾದೇಶವಲ್ಲ, ಬದಲಾಗಿ ಪಿತೂರಿಯ ಫಲಿತಾಂಶವಾಗಿದೆ. ನನ್ನ ರಾಜೀನಾಮೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ ನಾವು ಜನಾದೇಶದಿಂದ ಸೋತಿಲ್ಲ, ಬದಲಾಗಿ ಪಿತೂರಿಯಿಂದ ಸೋತಿದ್ದೇವೆ. ನಾನು ಸೋತಿಲ್ಲ. ಆದ್ದರಿಂದ ಲೋಕಭವನಕ್ಕೆ ಹೋಗುವುದಿಲ್ಲ ಎಂದಿದ್ದಾರೆ.

ಟಿಎಂಸಿಯ ಸ್ಪರ್ಧೆಯು ಬಿಜೆಪಿಯ ವಿರುದ್ಧವಾಗಿರಲಿಲ್ಲ, ಬದಲಾಗಿ ಬಿಜೆಪಿ ಪರವಾಗಿ ಕೆಲಸ ಮಾಡಿದ ಚುನಾವಣಾ ಆಯೋಗದ ವಿರುದ್ಧವಾಗಿತ್ತು. ಮತ ಎಣಿಕೆ



ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳು ನಡೆದಿವೆ. 100 ಕ್ಷೇತ್ರಗಳಲ್ಲಿ ನಮಗೆ ಮೋಸವಾಗಿದೆ. ತಮ್ಮ ಪಕ್ಷದ ಧೈರ್ಯ ಕುಂದಿಸಲು ಮತ ಎಣಿಕೆಯನ್ನು ಉದ್ದೇಶ ಪೂರ್ವಕವಾಗಿ ನಿಧಾನಗೊಳಿಸಲಾಯಿತು ಎಂದೂ ಅವರು ಆರೋಪಿಸಿದ್ದಾರೆ.

**ಆಯೋಗದ ವಿರುದ್ಧ ಆಕ್ರೋಶ**

ಜನರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಕಸಿದುಕೊಂಡು, ಇವಿಎಂಗಳನ್ನು ಲೂಟಿ ಮಾಡುವ ಮೂಲಕ ಮುಖ್ಯ ಚುನಾವಣಾ ಆಯುಕ್ತ ಈ ಚುನಾವಣೆಯ ಖಳನಾಯಕರಾಗಿದ್ದಾರೆ. ಆಯೋಗವು ಅಸಹ್ಯವಾಗಿ ಆಟವಾಡುತ್ತಿದೆ. ಮಹಾರಾಷ್ಟ್ರ, ಹರಿಯಾಣ, ಬಿಹಾರ ಮತ್ತು ಈಗ ಬಂಗಾಳದಲ್ಲಿ ಮತ ಕಳ್ಳತನ ಮಾಡಲಾಗಿದೆ. ಮತದಾನದ ನಂತರವೂ ಇವಿಎಂಗಳಲ್ಲಿ ಶೇ. 80-90 ರಷ್ಟು ಚಾರ್ಜ್ ಇರುತ್ತದೆ. ಇದು ಹೇಗೆ ಸಾಧ್ಯ. ಚುನಾವಣೆಗೆ ಎರಡು ದಿನಗಳ ಮುಂಚಿತವಾಗಿ ಅವರು ನಮ್ಮ ಜನರನ್ನು ಬಂಧಿಸಲು ಪ್ರಾರಂಭಿಸಿದರು. ಎಲ್ಲೆಡೆ ದಾಳಿ ನಡೆಸಲು ಶುರು ಮಾಡಿದರು. ಎಲ್ಲಾ ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರು. ಚುನಾವಣಾ ಆಯೋಗದೊಂದಿಗೆ ಸೇರಿ ಬಿಜೆಪಿ ಆಟವಾಡಿದೆ. ಇದು ಬಿಜೆಪಿ ಮತ್ತು ಚುನಾವಣಾ ಆಯೋಗದ ನಡುವೆ ಒಪ್ಪಂದ ಆಗಿದೆ. ಪ್ರಧಾನಿ ಮತ್ತು ಗೃಹ ಸಚಿವರು ಸಹ ಇದರಲ್ಲಿ ಭಾಗಿಯಾಗಿದ್ದಾರೆಂದು ದೂರಿದ್ದಾರೆ.

### ಮೇ 9ಕ್ಕೆ ನೂತನ ಸಿಎಂ ಪ್ರಮಾಣ ವಚನ

ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲವೆಂಬ ಹೇಳಿಕೆಯ ನಡುವೆಯೇ ಮೇ 9ಕ್ಕೆ ಪ್ರಮಾಣ ವಚನ ಸ್ವೀಕಾರಕ್ಕೆ ಬಿಜೆಪಿ ತಯಾರಿ ನಡೆಸುತ್ತಿದೆ.

15 ವರ್ಷಗಳ ಬ್ಯಾನರ್ಜಿ ಆಡಳಿತ ಕೊನೆಗೊಳಿಸಿ ಬಿಜೆಪಿ ದಾಖಲೆ ಬರೆದಿದೆ. ಬಿಜೆಪಿ ಪಶ್ಚಿಮ ಬಂಗಾಳ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಮಾತನಾಡಿ, ಮೇ 9ರಂದು ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೋರ್ ಅವರ ಜನ್ಮದಿನವಿದ್ದು, ಅಂದೇ ಬಿಜೆಪಿ ಸರ್ಕಾರ ರಚಿಸಲು ನಿರ್ಧರಿಸಿದೆ. ಪ್ರಮಾಣ ವಚನ ಸಮಾರಂಭಕ್ಕೆ ಎನ್‌ಡಿಎ ಆಡಳಿತವಿರುವ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನಿಸಲಾಗಿದೆ ಎಂದಿದ್ದಾರೆ.

ಎಸ್‌ಐಆರ್‌ನಲ್ಲಿ 90 ಲಕ್ಷ ಹೆಸರುಗಳನ್ನು ತೆಗೆದು ಹಾಕಿದ್ದರು. ನಾವು ನ್ಯಾಯಾಲಯದಲ್ಲಿ ಹೋರಾಡಿದ ನಂತರ 32 ಲಕ್ಷ ಹೆಸರುಗಳನ್ನು ಸೇರಿಸಲಾಯಿತು. ನನ್ನ ಜೀವನದಲ್ಲಿ ನಾನು ಇಂತಹ ಚುನಾವಣೆಯನ್ನು ನೋಡಿಲ್ಲವೆಂದು ಹೇಳಿದ್ದಾರೆ.

ಮತದಾನದ ಕೇಂದ್ರವೊಂದರಲ್ಲಿ ತಮ್ಮ ಮೇಲೆ ಹಲ್ಲೆ ನಡೆಸಿರುವುದಾಗಿ ಮಮತಾ ಅವರು ಗಂಭೀರ ಆರೋಪ ಮಾಡಿದ್ದಾರೆ. ನನ್ನ ಹೊಟ್ಟೆ ಮತ್ತು ಬೆನ್ನಿಗೆ ಒದೆಯಲಾಯಿತು. ಅಲ್ಲಿನ ಸಿಸಿಟಿವಿ ಆಫ್ ಮಾಡಲಾಗಿತ್ತು. ನನ್ನನ್ನು ಮತ ಎಣಿಕೆ ಕೇಂದ್ರದಿಂದ ಹೊರಕ್ಕೆ ತಳ್ಳಲಾಯಿತು. ಒಬ್ಬ ಮಹಿಳೆಯಾಗಿ ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು ಎಂದಿದ್ದಾರೆ.

**ಸಂವಿಧಾನ ಏನು ಹೇಳುತ್ತೆ**

ಮಮತಾ ಬ್ಯಾನರ್ಜಿ ಅವರ ಹೇಳಿಕೆ ಬೆನ್ನಲ್ಲೇ, ಬಹುಮತ ಪಡೆಯದೆಯೂ ಮುಖ್ಯಮಂತ್ರಿಯೊಬ್ಬರು ಆ ಸ್ಥಾನದಲ್ಲಿ ಉಳಿಯಲು ಸಾಧ್ಯವೇ ಎಂಬ ಪ್ರಶ್ನೆಗಳು ಉದ್ಭವಿಸಿವೆ. ಇಂತಹ ಸಂದರ್ಭದಲ್ಲಿ ಸಂವಿಧಾನ ಏನು ಹೇಳುತ್ತದೆ ಎಂಬ

» ನಾಲ್ಕನೇ ಪುಟದಲ್ಲಿ

# ಇಂದು ಅರ್ಜುನ ಸ್ಮಾರಕ ಉದ್ಘಾಟನೆ: ಸಿದ್ಧತೆ ಪರಿಶೀಲನೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಯಸಳೂರು ಅರಣ್ಯ ಪ್ರದೇಶದ ದಬ್ಬಳಿಕಟ್ಟೆಯಲ್ಲಿ ನಿರ್ಮಿಸಿರುವ ಅರ್ಜುನ ಸ್ಮಾರಕ ಮೇ 6ರ ಂದು ಲೋಕಾರ್ಪಣೆಯಾಗಲಿದ್ದು, ಶಾಸಕ ಸಿಮೆಂಟ್ ಮಂಜು ಅವರಿ ಸ್ಥಳ ಪರಿಶೀಲನೆ ನಡೆಸಿದರು.

2023ರ ಡಿ. 4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಅರ್ಜುನ ಆನೆ ವೀರ ಮರಣ ಹೊಂದಿತ್ತು. ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಿಸಿ ಪ್ರವಾಸಿ ತಾಣವಾಗಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದ ಹಿನ್ನಲೆಯಲ್ಲಿ ಸರ್ಕಾರ ಸ್ಮಾರಕ ನಿರ್ಮಿಸಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್‌ಕುಮಾರ್ ಹಾಗು ಸ್ಥಳೀಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಿಮೆಂಟ್ ಮಂಜು ಪ್ರವಾಸೋದ್ಯಮ ಉತ್ತೇಜಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಮಾತುಕತೆ ನಡೆಸಿದರು.

ಅರ್ಜುನ ಸ್ಮಾರಕ ಉದ್ಘಾಟನಾ ಸಮಾರಂಭದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಲಿದ್ದಾರೆ. ಶಾಸಕ ಸಿಮೆಂಟ್ ಮಂಜು ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗು ಜಿಲ್ಲಾಡಳಿತದ ಪ್ರಮುಖರು ಉಪಸ್ಥಿತರಿರಲಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ವನ್ಯ ಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ರಾಜನ್ ಸೇರಿ ಹಲವರು ಪಾಲ್ಗೊಳ್ಳಲಿದ್ದಾರೆ. ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಭಾಷಿಣಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಸಹಾಯಕ ಅರಣ್ಯ ಸಂರ ಕ್ಷಣಾಧಿಕಾರಿ ಎಂ.ಕೆ. ಮಧುಸೂದನ್, ಯಸಳೂರು ವಲಯ ಅರಣ್ಯಾಧಿಕಾರಿ ರೇವಣ ಸಿದ್ದಯ್ಯ ಬಿ.ಹಿರೇಮಠ್ ಇತರರು ಭಾಗವಹಿಸಲಿದ್ದಾರೆ.



### ಫೈಬರ್ ಪ್ರತಿಮೆಗೆ ಅಸಮಾಧಾನ

ಕ್ಯಾಪ್ಟನ್ ಖ್ಯಾತಿಯ ಅರ್ಜುನನ ಸ್ಮಾರಕವನ್ನು ಫೈಬರ್‌ನಲ್ಲಿ ನಿರ್ಮಿಸಿರುವುದು ಬೇಸರ ತರಿಸಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಂಚಿನ ಪ್ರತಿಮೆ ಮಾಡಿದ್ದರೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತಿತ್ತು. ಸಮಾಧಿಗೆ ಹೋಗಲು ಡಾಂಬರ್ ರಸ್ತೆ ಇಲ್ಲ, ಶೌಚಾಲಯ ವ್ಯವಸ್ಥೆಯನ್ನೂ ಮಾಡಿಲ್ಲ. ಮುಂದಿನ ದಿನಗಳಲ್ಲಾದರೂ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದರು.

ಈ ಪ್ರದೇಶವು ಮುಂದಿನ ದಿನಗಳಲ್ಲಿ ಹೆಸರಾಂತ ಪ್ರವಾಸಿ ಸ್ಥಳವಾಗಬೇಕು. ಅದಕ್ಕಾಗಿ ಹೆಚ್ಚುವರಿ ಅನುದಾನ ನೀಡುವಂತೆ ಸಚಿವರಲ್ಲಿ ಮನವಿ ಮಾಡಲಾಗುವುದು. ತಾಲ್ಲೂಕಿನಲ್ಲಿ ಉಂಟಾಗಿರುವ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದರು.

# ಮೇ 8 ರಿಂದ ಬೂವನಹಳ್ಳಿ ದೇವಿರಮ್ಮ ಜಾತ್ರೆ

## ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಭಾಗಿ

• ಪ್ರಜೋದಯ ವರದಿ

**ಹಾಸನ:** ಬೂವನಹಳ್ಳಿ ಗ್ರಾಮದಲ್ಲಿ ಮೇ 8 ರಿಂದ 10ರವರೆಗೆ ಶ್ರೀ ದೇವಿರಮ್ಮ ರಥೋತ್ಸವ ಮತ್ತು ಜಾತ್ರಾ ಮಹೋತ್ಸವ ಜರುಗಲಿದೆ. ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಪ್ರತಿಷ್ಠಾಪನೆ, ದೇವಿರಮ್ಮ ದೇವಿಗೆ ಸಹಸ್ರನಾಮ ಪೂಜೆಯೊಂದಿಗೆ ಸಂಜೆ 4 ಗಂಟೆಗೆ ದೇವಿಯ ರಥಾರೋಹಣ ಕಾರ್ಯ ನೆರವೇರಲಿದೆ. ಸಂಜೆ 7 ರಿಂದ ರಾತ್ರಿ 12ರವರೆಗೆ ವಿವಿಧ ಧಾರ್ಮಿಕ ಸೇವೆಗಳು ಹಾಗು ಮನರಂಜನಾ ಕಾರ್ಯಕ್ರಮ ನಡೆಯಲಿವೆ. ಜಾತ್ರಾ ಮಹೋತ್ಸವದ ಆರಂಭದ ದಿನ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಮೇ 9 ರಂದು ಮುಂಜಾನೆ 3 ಗಂಟೆಗೆ ಬಾಯಿ ಬೀಗ ಸೇವೆ ಆರಂಭವಾಗಲಿದೆ. ಬೆಳಿಗ್ಗೆ 8.30ಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹಾಗು ಗಣ್ಯರು, ರಥೋತ್ಸವಕ್ಕೆ ಚಾಲನೆ ನೀಡುವರು. ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ, 12.30ಕ್ಕೆ ಪ್ರಸಾದ ವಿನಿಯೋಗ ಕಾರ್ಯಕ್ರಮವಿದೆ. ಸಂಜೆ 7.30 ರಿಂದ ರಸಮಂಜರಿ ಕಾರ್ಯಕ್ರಮ ಇರಲಿದೆ.

ಮುಖ್ಯ ಅತಿಥಿಗಳಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕ ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭವಾನಿ ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮಾಜಿ ಶಾಸಕರಾದ ಪ್ರೀತಂ ಜೆ.ಗೌಡ, ಬಿ.ವಿ.ಕರೀಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

# ಭೂಸ್ವಾಧೀನ ವಿಳಂಬವಾಗಿಲ್ಲ: ಶಾಸಕರಿಂದ ತಪ್ಪು ಮಾಹಿತಿ

## ಹೆಚ್.ಡಿ.ರೇವಣ್ಣ ಆರೋಪಕ್ಕೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸ್ಪಷ್ಟನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಹೆದ್ದಾರಿ, ರೈಲ್ವೆ ಯೋಜನೆ ಅಭಿವೃದ್ಧಿ ಕಾಮಗಾರಿಗೆ ನಮ್ಮಿಂದ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿಲ್ಲ. ಮಾನ್ಯ ಶಾಸಕರು ತಪ್ಪು ಮಾಹಿತಿ ನೀಡುತ್ತಿದ್ದಾರೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೆಚ್.ಡಿ.ರೇವಣ್ಣ ಅವರ ಆರೋಪಕ್ಕೆ ಸ್ಪಷ್ಟನೆ ನೀಡಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇಲೂರು-ಹಾಸನ ರೈಲ್ವೆ ಯೋಜನೆ ಭೂ ಸ್ವಾಧೀನದಲ್ಲಿ ಯಾವ ಸಮಸ್ಯೆನೂ ಇಲ್ಲ. ಹೆಚ್ಚುವರಿ ಭೂಮಿ ಕೇಳಿದಾಗ ಕೆಲವು ತಾಂತ್ರಿಕ ತೊಂದರೆ ಎದುರಾಗಿವೆ ಅಷ್ಟೆ. ಕಾಮಸಮುದ್ರ ನೀರಾವರಿ ಯೋಜನೆ ಸಂಬಂಧ ಭೂ ಕೋರಿಕೆ ಸಮಿತಿ ಇದ್ದು, ಅವರ ಕೋರಿಕೆ ಮೇರೆಗೆ ನಾವು ಕೆಲಸ ಮಾಡಬೇಕು. ನಾವೇ ಬೇಡಿಕೆ



ಮುಂದಿಡಲು ಆಗುವುದಿಲ್ಲವೆಂದರು.

ಯಾವುದೇ ಭೂ ಪರಿಹಾರದ ಹಣ ವಾಪಾಸ್ ಹೋಗಿಲ್ಲ. ಜಿಲ್ಲಾಧಿಕಾರಿ ಅಥವಾ ಎಸ್‌ಎಲ್‌ಒ ಅವರು ಭೂ ಪರಿಹಾರದ ಹಣ ಇಟ್ಟುಕೊಳ್ಳಲು ಆಗುವುದಿಲ್ಲ. ಈ ಹಿಂದೆ ಎಸ್‌ಎಲ್ ಒಗಳ ಬಳಿ ಇದ್ದ ಹಣವನ್ನು ಈಗ ಒಂದು ಅಕೌಂಟ್‌ಗೆ ಸರ್ಕಾರವೇ ಜಮೆ ಮಾಡಿದೆ. ಆ ಹಣವನ್ನು ನಾವು ಯಾವಾಗಬೇಕಾದರೂ ಬಳಸಿಕೊಳ್ಳಬಹುದು. ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಬೇಲೂರು-ಆಲೂರು ನಡುವೆ 27 ಗ್ರಾಮಗಳ ಪೈಕಿ, 4 ಗ್ರಾಮ ಹೊರತು ಪಡಿಸಿ ಎಲ್ಲಾ ಸ್ವಾಧೀನ ಪ್ರಕ್ರಿಯೆ ಮುಗಿದಿದೆ ಎಂದರು.

**ಮಳೆಗೆ 34 ಮನೆಗಳಿಗೆ ಹಾನಿ**

ಮಳೆಯಿಂದ 5 ದನದ ಕೊಟ್ಟಿಗೆಗಳು ಹಾನಿಯಾಗಿದ್ದು, 34 ಮನೆಗಳಿಗೆ ಭಾಗಶಃ ಹಾನಿ ಹಾಗು ಒಂದು ಮನೆ ಸಂಪೂರ್ಣ ಹಾನಿಯಾಗಿದೆ. ಭಾಗಶಃ ಹಾನಿಗೊಳಗಾದ ಮನೆಗಳಿಗೆ 65,000 ಮತ್ತು ಸಂಪೂರ್ಣ ಹಾನಿಗೊಳಗಾದ ಮನೆಗೆ 1.20 ಲಕ್ಷ ಪರಿಹಾರ ನೀಡಲಾಗುವುದು. ಅರಕಲಗೂಡು, ಅರಸೀಕೆರೆ, ಬೇಲೂರು, ಚನ್ನರಾಯಪಟ್ಟಣ, ಹಾಸನ ಹಾಗು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಬಾಳೆ, ತೆಂಗು, ಅಡಿಕೆ, ದಾಳಿಂಬೆ ಸೇರಿ ಪ್ರಮುಖ ತೋಟಗಾರಿಕೆ ಬೆಳೆಗಳಿಗೆ ಒಟ್ಟು 44.2 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದೆ. ಪೂರ್ವ ಮುಂಗಾರು ಅವಧಿಯಲ್ಲಿ 570 ವಿದ್ಯುತ್ ಕಂಬಗಳು ಮತ್ತು 3,916 ಕಿಲೋಮೀಟರ್ ವಿದ್ಯುತ್ ತಂತಿಗಳು ಹಾನಿಗೊಳಗಾಗಿವೆ ಎಂದರು.

ಮಾ.1ರಿಂದ ಇಂದಿನವರೆಗೆ ಜಿಲ್ಲೆಯಲ್ಲಿ ಸರಾಸರಿ 79.9 ಮಿಲಿ ಮೀಟರ್ ಮಳೆಯಾಗಬೇಕಿತ್ತು. ಆದರೆ, ಕೇವಲ 55.2 ಮಿಲಿ ಮೀಟರ್ ಆಗುವ ಮೂಲಕ ಮಳೆಯ

» ನಾಲ್ಕನೇ ಪುಟದಲ್ಲಿ

### ಮಳೆಗೆ ಮಹಿಳೆ, 9 ಜಾನುವಾರು ಸಾವು

ಇತ್ತೀಚೆಗೆ ಸುರಿದ ಭಾರೀ ಗಾಳಿ-ಮಳೆಯಿಂದ ಮಹಿಳೆ ಸೇರಿ 9 ಜಾನುವಾರುಗಳು ಮೃತಪಟ್ಟಿವೆ. ಆಲೂರು ತಾಲ್ಲೂಕಿನ ಮಾದಿಹಳ್ಳಿ ಗ್ರಾಮದ ನೀಲಮ್ಮ ಅವರು ಸಿಡಿಲು ಬಡಿದು ಮೃತಪಟ್ಟಿದ್ದು, ಅವರ ಕುಟುಂಬಕ್ಕೆ 5 ಲ.ರೂ. ಪರಿಹಾರ ಹಾಗು ಜಾನುವಾರುಗಳ ಸಾವಿನ ಪ್ರಕರಣದಲ್ಲಿ ಮೂರು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ. ಉಳಿದ ಆರು ಪ್ರಕರಣಗಳಿಗೆ ಪರಿಹಾರ ನೀಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

# ಲೋಕಾಯುಕ್ತ ಬಲೆಗೆ ಸೆಸ್ಕಾಂ ಎಇ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಲಂಚ ಪಡೆಯುತ್ತಿದ್ದ ವೇಳೆ ಸೆಸ್ಕಾಂನ ಕಿರಿಯ ಇಂಜಿನೀಯರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ನುರನಕ್ಕಿ ವಿಭಾಗದ ದೇವರಾಜು ಲೋಕಾಯುಕ್ತಗೆ ಸಿಕ್ಕಿ ಬಿದ್ದ ಇಂಜಿನೀಯರ್. ತಾಲ್ಲೂಕಿನ ನುರನಕ್ಕಿ ಗ್ರಾಮದ ಶಶಾಂಕ್ ಎಂಬುವವರ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಲು 5,000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದ ಹಿನ್ನಲೆಯಲ್ಲಿ ಲಂಚದ ಹಣ ಪಡೆಯುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಹಣದ ಸಮೇತ ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ.

# ರಾಜಘಟ್ಟದಲ್ಲೇ ಲಾರಿಗಳ ನಿಲುಗಡೆಗೆ ಲಾರಿ ಮಾಲೀಕರ ಆಗ್ರಹ

• ಪ್ರಜೋದಯ ವರದಿ

**ಹಾಸನ:** ನಗರದ ರಾಜಘಟ್ಟ ರೈಲ್ವೆ ನಿಲ್ದಾಣ ಸಮೀಪದ ಗೂಡ್ಸ್ ಶೆಡ್ ಪ್ರದೇಶದಲ್ಲೇ ಲಾರಿಗಳ ನಿಲುಗಡೆಗೆ ಅನುಮತಿ ನೀಡುವಂತೆ ಆಗ್ರಹಿಸಿ ನೂರಾರು ಲಾರಿ ಮಾಲೀಕರು ಮತ್ತು ಚಾಲಕರು ಮಂಗಳವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಕೆ.ಟಿ.ಸುರೇಶ್ ಮತ್ತು ಶೇಕ್ ಅಹಮದ್ ಅವರು ಮಾತನಾಡಿ, ಸುಮಾರು 20-30 ವರ್ಷಗಳ ಹಿಂದೆ ಆಗಿನ ಶಾಸಕ ಹೆಚ್.ಎಸ್.ಪ್ರಕಾಶ್

### ಅನುಮತಿಗಾಗಿ ಜಿಲ್ಲಾಡಳಿತಕ್ಕೆ ಮನವಿ



ಅವರ ಮುತುವರ್ಜಿಯಿಂದ ಅಂದಿನ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ, ರಾಜಘಟ್ಟ ರಸ್ತೆ ಬಳಿಯ ಜಾಗವನ್ನು ಲಾರಿ ನಿಲುಗಡೆಗಾಗಿ ಕೊಡಿಸಿದ್ದರು. ಅಂದಿನಿಂದ ಇಂದಿನವರೆಗೆ ಯಾವುದೇ ವ್ಯತ್ಯಯವಿಲ್ಲದೆ ಲಾರಿ ನಿಲ್ಲಿಸಿ ಕೊಂಡು, ವಿವಿಧ ಅಗತ್ಯ ವಸ್ತುಗಳ ಸಾಗಾಣಿಕೆ ಮಾಡುತ್ತಿದ್ದೆವು ಎಂದರು.

ಪ್ರತಿ ದಿನ ರೈತರಿಗೆ ಅಗತ್ಯವಾದ ಗೊಬ್ಬರ, ಆಲೂಗೆಡ್ಡೆ ಸೇರಿ ಕೃಷಿ ಸಂಬಂಧಿತ ವಸ್ತುಗಳ ಜೊತೆಗೆ, ಜನಸಾಮಾನ್ಯರಿಗೆ ಬೇಕಾಗುವ ಅಕ್ಕಿ, ಸಿಮೆಂಟ್, ಕಟ್ಟಡ ಸಾಮಾಗ್ರಿ ಮತ್ತು ಇತರೆ ದಿನನಿತ್ಯ ಬಳಕೆಯ ವಸ್ತುಗಳನ್ನು ಇಲ್ಲಿಂದಲೇ ಸಾಗಿಸಲಾಗುತ್ತಿದೆ. ಇದರಿಂದ ರೈತರು ಹಾಗು ವ್ಯಾಪಾರಿಗಳಿಗೆ ಬಹಳಷ್ಟು ಅನುಕೂಲವಾಗುತ್ತಿದ್ದು, ಸರಬರಾಜು ವ್ಯವಸ್ಥೆಯೂ ಸುಗಮವಾಗಿದೆ. ಈ

» ನಾಲ್ಕನೇ ಪುಟದಲ್ಲಿ

# ಇಂದು ಪ್ರತಿಭಾ ಪುರಸ್ಕಾರ

**ಹಾಸನ :** ಜಿಲ್ಲಾಡಳಿತದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬುಧವಾರ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಭಾಗವಹಿಸಲಿದ್ದಾರೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಕಾರ್ಯಕಮದಲ್ಲಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 55 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆ ಕಳೆದ ಬಾರಿ ಆರನೇ ಸ್ಥಾನದಲ್ಲಿತ್ತು, ಈ ಬಾರಿ ನಾಲ್ಕನೇ ಸ್ಥಾನಕ್ಕೆ ಏರಿಕೆಯಾಗಿದೆ.


# ಮಳೆ ಮುನ್ಸೂಚನೆ: ಜಿಲ್ಲೆಯಲ್ಲಿ ಯೆಲ್ಲೋ ಅಲರ್ಟ್

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯದಲ್ಲಿ ಪೂರ್ವ ಮುಂಗಾರು ಅಬ್ಬರ ಮುಂದಿನ 4 ದಿನಗಳು ಜೋರಾಗಲಿದೆ. ಹಾಸನ ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬುಧವಾರ ಭಾರೀ ಮಳೆ ಸಾಧ್ಯತೆ ಹಿನ್ನಲೆಯಲ್ಲಿ ಯೆಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

ಮೇ 6 ರಂದು ದಕ್ಷಿಣ ಒಳನಾಡಿನ ಜೊತೆಗೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಗೂ ಅಲರ್ಟ್ ನೀಡಲಾಗಿದೆ. ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ , ದಕ್ಷಿಣ ಕನ್ನಡಕ್ಕೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಮೇ 7 ರಂದು ಬೆಳಗಾವಿ, ಧಾರವಾಡ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತು ಪಡಿಸಿ, ರಾಜ್ಯದ ಬಹುಪಾಲು ಎಲ್ಲಾ ಜಿಲ್ಲೆಗಳಿಗೂ ಹಳದಿ ಎಚ್ಚರಿಕೆ ನೀಡಲಾಗಿದೆ. ಕರಾವಳಿಯ ಉಡುಪಿ ಜಿಲ್ಲೆಗೂ ಅಲರ್ಟ್ ವಿಸ್ತರಣೆಯಾಗಿದೆ. ಮೇ 8 ರಂದು ಮಲೆನಾಡು, ಕರಾವಳಿ (ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಸೇರಿ), ಮಧ್ಯ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಹಳದಿ ಮುನ್ನೆಚ್ಚರಿಕೆ ಮುಂದುವರಿದಿದೆ. ಈ ಭಾಗಗಳಲ್ಲಿ ಗುಡುಗು, ಮಿಂಚು ಸಹಿತ ಸಾಧಾರಣ ಮಳೆ ಮತ್ತು ಬಿರುಗಾಳಿ ಮುಂದುವರಿಯಲಿದೆ.

# ಜಿಲ್ಲೆಗಿಂದು ಅರಣ್ಯ ಸಚಿವ-ಉಸ್ತುವಾರಿ ಸಚಿವರ ಭೇಟಿ



• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಮೇ 6 ರಂದು ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದು, ಅಂದು ಬೆಳಿಗ್ಗೆ 10 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುವ ಹಾಸನದ ಹೆಮ್ಮೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಜಿಲ್ಲಾ ಪಂಚಾಯಿತಿಯ ಹೇಮಾವತಿ ಸಂಭಾಗಣದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸು ವರು. ಮಧ್ಯಾಹ್ನ 1.30 ಕ್ಕೆ ಯಸಳೂರಿನಲ್ಲಿ ಏರ್ಪಡಿಸಿರುವ ಅರ್ಜುನ ಸ್ಮಾರಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಮೇ 06 ರಂದು ಮಧ್ಯಾಹ್ನ 4.30ಕ್ಕೆ ಅರ್ಜುನ ಸಾ್ಮರಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಪಟ್ಟಣದಿಂದ ದೂರ ನಿಲ್ದಾಣ ಬೇಡ | ಪರ್ಯಾಯ ಜಾಗಕ್ಕೆ ಹುಡುಕಾಟ

# ಬೇಲೂರು ನೂತನ ಬಸ್ ನಿಲ್ದಾಣಕ್ಕೆ ಕೂಡಿಬಾರದ ಕಾಲ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಬೇಲೂರು ಪಟ್ಟಣದಲ್ಲಿ ಸಂಚಾರ ದಟ್ಟಣೆ ನಿಯಂತ್ರಣ ಹಾಗು ಸಂಚಾರ ವ್ಯವಸ್ಥೆ ಸುಗಮಗೊಳಿಸುವ ಉದ್ದೇಶದಿಂದ ಪಟ್ಟಣದ ಹೊರವಲಯದಲ್ಲಿ ಆರಂಭವಾಗಿದ್ದ ನೂತನ ಬಸ್ ನಿಲ್ದಾಣ ಯೋಜನೆಯನ್ನು ಸ್ಥಳೀಯರ ತೀವ್ರ ವಿರೋಧದ ಕಾರಣಕ್ಕೆ ಕೈಬಿಡಲಾಗಿದೆ.

ಆ ಮೂಲಕ ಬಹು ವರ್ಷಗಳ ಸಮಸ್ಯೆಗೆ ಪರಿಹಾರ ಸಿಗದಂತಾಗಿದೆ. ಬೇಲೂರು ಐತಿಹಾಸಿಕ ಪ್ರಸಿದ್ಧಿ ಪಡೆದಿರುವ ಸ್ಥಳವಾಗಿದ್ದು, ಚನ್ನಕೇಶವ ಸ್ವಾಮಿ ದೇವಾಲಯ ಹಾಗು ವಿವಿಧ ಪ್ರವಾಸಿ ತಾಣಗಳ ವೀಕ್ಷಣೆಗೆ ನಿತ್ಯ ಸಾವಿರಾರು ಪ್ರವಾಸಿಗರು ಬರುತ್ತಾರೆ. ಚಿಕ್ಕಮಗಳೂರು, ಶೃಂಗೇರಿ, ಮಂಗಳೂರು ಸೇರಿ ಅನೇಕ ಪ್ರವಾಸಿ ತಾಣಗಳಿಗೆ ಸಂಪರ್ಕಿಸುವ ಪ್ರಮುಖ ಪಟ್ಟಣ ಇದಾಗಿದೆ. ಆದರೆ, ದಶಕಗಳ ಹಿಂದೆ ನಿರ್ಮಾಣವಾದ ಬಸ್ ನಿಲ್ದಾಣ ಶಿಥಿಲಾವಸ್ಥೆ ತಲುಪಿರುವುದು ಮಾತ್ರವಲ್ಲದೆ ಕಿರಿದಾದ ಜಾಗವಾಗಿರುವುದರಿಂದ ಸಾರಿಗೆ ಬಸ್‌ಗಳ ಓಡಾಟಕ್ಕೆ ಸಮಸ್ಯೆಯಾಗುತ್ತಿದೆ. ಆ ಹಿನ್ನಲೆಯಲ್ಲಿ ಹೊರವಲಯದ ರಾಯ ಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿತ್ತು.

ಪ್ರಸ್ತುತ ನಿಲ್ದಾಣದಲ್ಲಿ ಒಂದು ಬಾರಿ ಕೇವಲ ಹತ್ತು ಬಸ್‌ಗಳು ಮಾತ್ರ ನಿಲ್ಲಬಹುದಾಗಿದೆ. ಪ್ರಯಾಣಿಕರು ಕುಳಿತುಕೊಳ್ಳಲು ಜಾಗ, ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲ. ನೂತನ ಬಸ್ ನಿಲ್ದಾಣ ಮಾಡಬೇಕೆಂದು ಕಳೆದ ಎರಡು ದಶಕಗಳಿಂದ ಒತ್ತಾಯ, ಹೋರಾಟಗಳು ನಡೆಯುತ್ತಿವೆ.

**ಸ್ಥಳೀಯರ ವಿರೋಧ ಏಕೆ**

ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಶಾಸಕ ಹೆಚ್.ಕೆ. ಸುರೇಶ್ ಅವರು ಹೊರ ಭಾಗದಲ್ಲಿ ನೂತನ ಬಸ್ ನಿಲ್ದಾಣಕ್ಕೆ ಮುಂದಾಗಿದ್ದರು. ಆದರೆ, ಇರುವ ಜಾಗದಲ್ಲೇ ಹೊಸ ಬಸ್ ನಿಲ್ದಾಣ ನಿರ್ಮಿಸಬೇಕು. ಬೇರೆ ಕಡೆ ಸ್ಥಳಾಂತರಿಸಿದರೆ ವ್ಯಾಪಾರಿಗಳು ಹಾಗು ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂಬುದು



> **"ಬೇಲೂರಿನಲ್ಲಿ ಬಸ್ ನಿಲ್ದಾಣ ನಿರ್ಮಾಣವಾಗಬೇಕೆನ್ನುವುದು ಹಲವು ವರ್ಷಗಳ ಬೇಡಿಕೆ. ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಬೇಕು.**
> **-ತಾರಾನಾಥ್, ಸ್ಥಳೀಯ**

ಕೆಲವರ ವಾದ. ಈ ವಿಚಾರವಾಗಿ ಪ್ರತಿಭಟನೆಗಳು ನಡೆದ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನೇ ಕೈಬಿಡಲಾಗಿದೆ.

### ದೂರದ ನಿಲ್ದಾಣ ಬೇಡವೇ ಬೇಡ

ಹೊಸದಾಗಿ ರಾಯಪುರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಸ್ ನಿಲ್ದಾಣಕ್ಕೆ ಸ್ಥಳೀಯರ ವಿರೋಧಕ್ಕೆ ಬಲವಾದ ಕಾರಣಗಳಿವೆ. ಪಟ್ಟಣದಿಂದ ಭಾರೀ ದೂರದಲ್ಲಿರುವ ಅಲ್ಲಿಗೆ ಕೇವಲ ಬಸ್ ಹತ್ತುವುದಕ್ಕಾಗಿ ಅಷ್ಟು ದೂರ ಹೋಗಲು ಸಾಧ್ಯವಿಲ್ಲ. ಅದಕ್ಕಾಗಿ ಮತ್ತೆ ಆಟೋ ಬಾಡಿಗೆ ನೀಡಬೇಕಾಗುತ್ತದೆ. ಗ್ರಾಮೀಣ ಭಾಗದಿಂದ ಬರುವವರಿಗೂ ಸಮಸ್ಯೆಯಾಗುತ್ತದೆ. ಪಟ್ಟಣದ ಮಧ್ಯ ಭಾಗದಲ್ಲೇ ಕಾಮಗಾರಿ ಪ್ರಾರಂಭಿಸಬೇಕೆನ್ನುವುದು ಸ್ಥಳೀಯ ಆಗ್ರಹ. ಹೀಗಾಗಿ ನೂತನ ಕಾಮಗಾರಿಯನ್ನು ಕೈಬಿಡಲಾಗಿದೆ.

ನೂತನ ಬಸ್ ನಿಲ್ದಾಣಕ್ಕೆ ನಬಾರ್ಡ್‌ನಿಂದ 10 ಕೋ.ರೂ. ಅನುದಾನ ಸಿಗುವ ಭರವಸೆ ಇದೆ. ಆದರೆ ಸ್ಥಳೀಯರು, ವಿವಿಧ ಸಂಘ-ಸಂಸ್ಥೆಗಳು ಬಸ್ ನಿಲ್ದಾಣ ಸ್ಥಳಾಂತರಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ಕಾರಣ ಲೋಕೋಪಯೋಗಿ ಹಾಗು ಪ್ರವಾಸೋದ್ಯಮ ಸಚಿವರನ್ನು ಭೇಟಿ ಮಾಡಿ ಪಟ್ಟಣದಲ್ಲೇ ಜಾಗ ಹುಡುಕುವ ಪ್ರಯತ್ನ ಮುಂದುವರಿದಿದೆ. ನಿಲ್ದಾಣದ ಪಕ್ಕದಲ್ಲಿರುವ ಪ್ರವಾಸಿ ಮಂದಿರವನ್ನು ಬೇರೆಡೆಗೆ ಸ್ಥಳಾಂತರಿಸಿ ಆ ಜಾಗವನ್ನು ನೀಡುವಂತೆ ಸಂಬಂಧಪಟ್ಟ ಸಚಿವರು ಹಾಗು ಅಧಿಕಾರಿಗಳಿಗೆ ಮನವರಿಕೆ ಮಾಡಲಾಗಿದೆ. ಮನವಿಗೆ ಸ್ಪಂದಿಸಿ ಜಾಗ ನೀಡಿದರೆ ಬಸ್ ನಿಲುಗಡೆ, ಪ್ರಯಾಣಿಕರಿಗೆ ಆಸನ ವ್ಯವಸ್ಥೆ, ಮಳಿಗೆ, ಶೌಚಾಲಯ ಸೇರಿ ಎಲ್ಲಾ ರೀತಿಯ ಸೌಲಭ್ಯವುಳ್ಳ ಸುಸಜ್ಜಿತ ನಿಲ್ದಾಣ ನಿರ್ಮಿಸಬಹುದು. ಬೇಲೂರು ಪಟ್ಟಣ ವ್ಯಾಪ್ತಿ ವಿಸ್ತರಿಸುತ್ತಿದ್ದು, ಹೊರವಲಯದಲ್ಲಿ ಮತ್ತೊಂದು ಬಸ್ ನಿಲ್ದಾಣ ಮಾಡಬೇಕೇನ್ನುವ ಆಶಯ ಕೂಡ ಇದೆ. ಈ ಬಗ್ಗೆಯೂ ಸಚಿವರ ಗಮನಕ್ಕೆ ತರಲಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದ್ದಾರೆ.

# ವೃದ್ಧನ ಮೇಲೆ ಪುಡಿ ರೌಡಿ ದರ್ಪ

• ಪ್ರಜೋದಯ ವರದಿ

**ಹಾಸನ:** ಪುಡಿ ರೌಡಿಯೊಬ್ಬ ಕುಡಿದ ಅಮಲಿನಲ್ಲಿ ವೃದ್ಧನ ಮೇಲೆ ಮಚ್ಚಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಚಿಕ್ಕಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ. ತಮ್ಮೇಗೌಡ (68) ಹಲ್ಲೆಗೊಳಗಾದ ವೃದ್ಧ. ಬೋರೇಗೌಡ ಅಲಿಯಾಸ್ ಲೋಕೇಶ್ (49) ಹಲ್ಲೆ ನಡೆಸಿದ ಆರೋಪಿ.

ತಮ್ಮೇಗೌಡ ಅವರು ವ್ಯಾಪಾರ ಮಾಡಲು ತಮ್ಮ ತೋಟದಲ್ಲಿ ಎಳನೀರು ಕಡೆವಿಕೊಂಡು ಪತ್ನಿಯೊಂದಿಗೆ ಬರುತ್ತಿದ್ದರು. ಈ ವೇಳೆ ಎದುರಾದ ಬೋರೇಗೌಡ ಏಕಾಏಕಿ ಮಚ್ಚನ್ನು ಉಲ್ಟಾ ಮಾಡಿಕೊಂಡು ಥಳಿಸಿದ್ದಾನೆ. ಮಚ್ಚಿನಿಂದ ಹಲ್ಲೆ ನಡೆಸುವ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ವೃದ್ಧ ನೆಲಕ್ಕೆ ಬಿದ್ದು ತನ್ನನ್ನು ಬಿಟ್ಟುಬಿಡುವಂತೆ ಪರಿಪರಿಯಾಗಿ ಬೇಡಿಕೊಂಡರು ಬಿಡದೆ, ಕಾಲಿನಲ್ಲಿ ಒದ್ದು, ಮಚ್ಚಿನಿಂದ ಮನಸೋ ಇಚ್ಛೆ ಹಲ್ಲೆ ನಡೆಸಿದ್ದಾನೆ. ಪತಿ ಮೇಲೆ ಹಲ್ಲೆ ಮಾಡುವುದನ್ನು ಕಂಡು ತಮ್ಮೇಗೌಡರ ಪತ್ನಿ ಭಯದಿಂದ ಓಡಿ ಹೋಗಿದ್ದಾರೆ.



ಪುಡಿ ರೌಡಿ ಲೋಕೇಶ್ ಹಲ್ಲೆ ನಡೆಸಿದ ನಂತರ ನೃತ್ಯ ಮಾಡುತ್ತಾ ವಿಕೃತಿ ಮೆರೆದಿರುವುದು ಮಾತ್ರವಲ್ಲದೇ, ತಮ್ಮೇಗೌಡ ಅವರ ಪತ್ನಿಯನ್ನು ಹಿಂಬಾಲಿಸಿಕೊಂಡು ಹೋಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ್ದಾನೆ. ಅಷ್ಟರಲ್ಲಿ ವೃದ್ಧೆ ಓಡಿ ಹೋಗಿ ಮನೆಯ ಬಾಗಿಲು ಹಾಕಿಕೊಂಡಿದ್ದಾರೆ. ಮನೆಯ ಕಿಟಕಿಗಳನ್ನು ಪುಡಿ ರೌಡಿ ಒಡೆದು ಹಾಕಿ ಅಲ್ಲಿಂದ ಪರಾರಿಯಾಗಿದ್ದಾನೆ. ಹಲ್ಲೆ ನಡೆಸುತ್ತಿದ್ದರೂ ಸ್ಥಳದಲ್ಲಿದ್ದವರು ಭಯದಿಂದ ತಡೆಯಲು ಮುಂದಾಗಿಲ್ಲ. ತಮ್ಮೇಗೌಡರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

# ಅಡಿಕೆ ಬೆಳೆಯ ಭವಿಷ್ಯ ಮತ್ತು ವಾಸ್ತವ

ಅಡಿಕೆ ಬೆಳೆಗಾರರಿಗೆ ನಿತ್ಯ ಕಾಡುತ್ತಿರುವ ಬೆಲೆ ಸ್ಥಿರತೆ ಎಂಬ ಆತಂಕಕ್ಕೆ ಉತ್ತರವನ್ನು ಅವರವರು ಅವರವರ ತೋಟದಲ್ಲೇ ಹುಡುಕಬೇಕು. ಬೆಲೆ ಏರಿದರೆ ಖುಷಿ, ಬೆಲೆ ಕುಸಿದರೆ ಅಚ್ಚರಿ ಇಲ್ಲ. ಸ್ಥಿರವಾಗಿ ಉಳಿದರೂ ತೊಂದರೆ ಇಲ್ಲ. ಮೂರಕ್ಕೂ ಸಿದ್ದರಾಗಿರಬೇಕು. ಕೃಷಿಕರಿಗೆ ಕೃಷಿಯೇ ಸಹಾಯ ಮಾಡುವ ವೃತ್ತಿ.

1970 ನೇ ಇಸವಿಯಲ್ಲಿ ಅಡಿಕೆಯ ಬೆಲೆ ಭಾರೀ ಇಳಿಮುಖವಾಗಿ ಅಡಿಕೆ ಬೆಳೆಗಾರರು ಕಂಗಾಲಾಗಿದ್ದರು. ಆ ನಂತರ ಕೆಲವೇ ವರ್ಷಗಳಲ್ಲಿ ಪರಿಸ್ಥಿತಿ ಸುಧಾರಣೆಯಾಗುತ್ತಾ ಬಂತು. ಆ ಸಮಯದಲ್ಲಿ ಇದ್ದ ಅಡಿಕೆ ಉತ್ಪಾದನೆ ಈಗಿನ 25% ದಷ್ಟು ಮಾತ್ರ ಇದ್ದಿರಬಹುದು. ಆಗ ಮಾರುಕಟ್ಟೆ ವಿಚಾರದಲ್ಲಿ ಸೋತು ಹೀಗಾಗಿದೆ ಎಂದು ಮನಗಂಡ ರೈತ ಮುಖಂಡರು ಅದಕ್ಕೊಂದು ವ್ಯವಸ್ಥೆಯನ್ನು ಮಾಡಿಕೊಳ್ಳುವ ಬಗ್ಗೆ ಗಮನ ಹರಿಸಿ ಆದನ್ನು ಮಾಡಿಯೇ ಬಿಟ್ಟರು. ಕ್ರಮೇಣ ಅಡಿಕೆಯ ಬೆಲೆ ಭಾರೀ ಇಳಿಕೆಯಾಗದಿದ್ದರೂ ಸ್ಥಿರವಾಗಿ ಮುಂದುವರಿಯಿತು. ಖಾಸಗಿ ವರ್ತಕರು, ಸಹಕಾರೀ ವ್ಯವಸ್ಥೆ ಪೈಪೋಟಿಯಲ್ಲಿ ಅಡಿಕೆ ಬೆಳೆಗಾರರಿಗೆ ಸ್ಥೈರ್ಯ ದೊರೆಯಿತು. ಹಾಗೇ ಮುಂದುವರಿಯುತ್ತಾ 1997- 98 ನೇ ಸಾಲಿನಲ್ಲಿ ಭಾರೀ ಏರಿಕೆ ಉಂಟಾಯಿತು. ಕ್ರಮೇಣ ಅದು ಇಳಿಕೆಯ ಹಾದಿ ಹಿಡಿಯುತ್ತಾ ಪಾತಾಳಕ್ಕೆ ಇಳಿದು ಮತ್ತೆ ಸ್ವಲ್ಪ ಸ್ವಲ್ಪವೇ ಏರಿಕೆ ಕಾಣುತ್ತಾ 2014ರಲ್ಲಿ ಹಾಗೂ 2025 ನೇ ಇಸವಿಯಲ್ಲಿ ಅದು ಮತ್ತೆ ಅದು ಉತ್ತುಂಗಕ್ಕೇ ಏರಿತು. ಆನಂತರ ಸ್ವಲ್ಪ ಸ್ವಲ್ಪ ಇಳಿಕೆಯಾಗುತ್ತಾ, ಎರಿಕೆಯಾಗುತ್ತಾ ಇದೆಯಾದರೂ, ಹಿಂದಿನಂತೆ ಪಾತಾಳಕ್ಕೆ ಇಳಿಯದೆ ಉಳಿದಿದೆ ಎಂಬುದು ಅಡಿಕೆ ಬೆಳೆಗಾರರ ಅನುಭವ. ಅದು 2000 ನೇ ಇಸವಿಯ ಸುಮಾರು. ಆಗ ಅಡಿಕೆ ಬೆಳೆಗಾರರು ಬಾರೀ ಕಷ್ಟದ ದಿನಗಳನ್ನು ಕಂಡಿದ್ದರು. ಅಡಿಕೆ ಮರಗಳಿಗೆ ಗೊಬ್ಬರ ಹಾಕುವುದೇ, ಕೆಲಸ ಮಾಡಿಸುವುದೇ ಯಾವುದಕ್ಕೂ ಅಡಿಕೆಗೆ ಬೆಲೆ ಏನೂ ಇಲ್ಲ. ಎಂಬ ಆತಂಕ ಇತ್ತು. ಜೊತೆಗೆ ಮಾರಾಟ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ವ್ಯಾಪಾರಸ್ಥರೂ ಸಹ ದಿವಾಳಿ ಹಂತಕ್ಕೆ ತಲುಪಿದ್ದರು. ಆಗ ರೈತರಿಗೆ ತಜ್ಞರು ಮತ್ತು ಸಾಂತ್ವನ ಹೇಳುವವರು ಹೇಳಿದ ಮಾತು ಈಗಲೂ ನೆನಪಿದೆ. ಅಡಿಕೆಗೆ ಭವಿಷ್ಯವಿಲ್ಲ, ಆದಷ್ಟು ಬೇರೆ ಬೆಳೆ ಬಗ್ಗೆ ಚಿಂತಿಸಿರಿ. ಯಾವುದೇ ಕಾರಣಕ್ಕೂ ಬೆಳೆ ಪ್ರದೇಶವನ್ನು ವಿಸ್ತರಿಸದಿರಿ ಎನ್ನುತ್ತಾ ರೈತರನ್ನು ಸಮಾಧಾನ ಮಾಡುತ್ತಿದ್ದುದು ನಮಗೆಲ್ಲಾ ಗೊತ್ತಿದೆ. ಕೆಲವು ಜನ ಇದನ್ನು ನಂಬಿ ತಮ್ಮ ಬೆಳೆಯ ಆರೈಕೆಯನ್ನೂ ಕಡಿಮೆ ಮಾಡಿದ್ದುಂಟು.



ಆದರೆ ಇವರೆಲ್ಲರ ಸಲಹೆ ಬರೇ ಊಹನೆ ಮಾತ್ರವೇ ಆಗಿತ್ತು ಹೊರತಾಗಿ ನಿಖರ ಅಧ್ಯಯನ ಆಗಿರಲಿಲ್ಲ. ಬೆಳೆಗಾರರನ್ನು ಬರೇ ಗೊಂದಲಕ್ಕೀಡುಮಾಡುವ ಹೇಳಿಕೆಯಾಗಿತ್ತು. ಒಂದು ವೇಳೆ ಇದು ಸತ್ಯವೇ ಆಗಿದ್ದಲ್ಲಿ ನಂತರದ ವರ್ಷಗಳಲ್ಲಿ ಅಡಿಕೆ ಧಾರಣೆ ಏರಿಕೆಯಾಗಲು ಸಾಧ್ಯವಿರಲಿಲ್ಲ. ಅಡಿಕೆ ಬಗ್ಗೆ ಗೊಂದಲದ ಹೇಳಿಕೆಯನ್ನು ಕೇಳಿಯೂ ಕೇಳಿಸದಂತೆ ಏನು ಬೇಕಾದರೂ ಆಗಲಿ ಎಂದು ಅಡಿಕೆ ಬೆಳೆಯನ್ನು ವಿಸ್ತರಿಸುತ್ತಾ ಬಂದ ಕೆಲವರಲ್ಲಿ ಈಗ 10 ಕ್ವಿಂಟಾಲು ಉತ್ಪಾದನೆಯಾಗುತ್ತಿದ್ದಲ್ಲಿ 100 ಕ್ವಿಂಟಾಲಿಗೂ ಮಿಕ್ಕಿ ಉತ್ಪಾದನೆಯಾಗುತ್ತಿದೆ. ಅಡಿಕೆಯ ಉತ್ಪಾದನೆ ಹೆಚ್ಚಳವಾದ ಲೆಕ್ಕವನ್ನು ನೋಡಿದರೆ ಬೆಲೆ ಇಷ್ಟರ ಮಟ್ಟಿಗೆ ಸ್ಥಿರವಾಗಿದೆ ಎಂದರೆ ಅಡಿಕೆಗೆ ಬೇಡಿಕೆ ಇಲ್ಲದಿಲ್ಲ. ಬಳಕೆ ತಗ್ಗುತ್ತಿದೆ ಎಂಬುದೆಲ್ಲಾ ಬರೇ ವದಂತಿ.

ಅಡಿಕೆ ಬೆಳೆಯ ಬಗ್ಗೆ ಯಾವುದೇ ಅಪ ಪ್ರಚಾರವನ್ನೂ ಈಗ ಯಾರೂ ನಂಬುತ್ತಿಲ್ಲ. ಜನ ದುಂಬಾಲು ಬಿದ್ದು ಅಡಿಕೆ ತೋಟ ವಿಸ್ತರಿಸುತ್ತಿದ್ದಾರೆ. ಈ ವರ್ಷ ದಕ್ಷಿಣ ಕನ್ನಡದಲ್ಲಿ ಸುಮಾರು 10 ಲಕ್ಷಕ್ಕೂ ಅಡಿಕೆ ಬೀಜಗಳು ಖಾಸಗಿ ತೋಟಗಳಿಂದ ಮತ್ತು ಸರಕಾರೀ ಸಂಶೋಧನಾ ಕೇಂದ್ರಗಳಿಂದ ಕರ್ನಾಟಕ, ಕೇರಳ, ತಮಿಳುನಾಡಿಗೆ ಮಾರಾಟವಾಗಿದೆ. ಸುಮಾರಾಗಿ ಎಲ್ಲಾ ನರ್ಸರಿಗಳಿಂದ 2 ಲಕ್ಷಕ್ಕೂ ಹೆಚ್ಚು ಸಸಿಗಳು ಈಗಾಗಲೇ ಮಾರಾಟವಾಗಿವೆ. ಇನ್ನೂ ಸುಮಾರು 3-5 ಲಕ್ಷದಷ್ಟು ಸಸಿಗಳು ವಿವಿಧ ನರ್ಸರಿಗಳಲ್ಲಿ ಮಾರಾಟಕ್ಕೆ ಸಿದ್ದವಾಗಿವೆ. ಮಲೆನಾಡಿನಾದ್ಯಂತ ಈ ವರ್ಷ ಸುಮಾರು 20-30 ಲಕ್ಷಕ್ಕೂ ಹೆಚ್ಚು ಅಡಿಕೆ ಸಸಿಗಳು ತಯಾರಾಗಿದ್ದು, ಸುಮಾರು ಅರ್ಧಕ್ಕೂ ಹೆಚ್ಚು ಪಾಲು ಆಗಲೇ ಮಾರಾಟವಾಗಿವೆ. ಇದು ಕಳೆದ ಹತ್ತು ವರ್ಷಗಳಿಂದ ಏಕ ಪ್ರಕಾರವಾಗಿ ಸಸ್ಯೋತ್ಪಾದನೆ, ನಾಟಿ ಮುನ್ನಡೆಯುತ್ತಿದೆ. ಮಲೆನಾಡಿನ ಬಹುತೇಕ ಸಸಿಗಳು ಅಲ್ಲೇ ಸುತ್ತಮುತ್ತ ಮತ್ತು ಅರೆ ಮಲೆನಾಡು ಭಾಗಗಳಲ್ಲಿ ನೆಡಲ್ಪಟ್ಟಿವೆ. ಒಂದು ಎಕ್ರೆಗೆ 500 ಸಸಿಯಂತೆ 1 ಲಕ್ಷ ಗಿಡ ಎಂದರೆ 100 ಎಕ್ರೆ ವಿಸ್ತೀರ್ಣದಷ್ಟು ಬೆಳೆ ಪ್ರದೇಶವಾಗುತ್ತದೆ. ಒಟ್ಟಾರೆಯಾಗಿ ಕರಾವಳಿ ಮಲೆನಾಡಿನಾದ್ಯಂತ ಮಾರಾಟವಾದ ಸಸಿಗಳಿಂದ ವರ್ಷಕ್ಕೆ ಏನಿಲ್ಲವೆದರೂ 300 ಎಕ್ರೆಗೂ ಹೆಚ್ಚು ಅಡಿಕೆ ಬೆಳೆ ಕ್ಷೇತ್ರ ಹೆಚ್ಚಳವಾಗುತ್ತಿದೆ. ತಮಿಳುನಾಡು ಮತ್ತು ಆಂದ್ರ ಪ್ರದೇಶ, ಕೇರಳದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ಅಡಿಕೆ ಬೆಳೆ ಪ್ರದೇಶಗಳು ಹೆಚ್ಚುತ್ತಿವೆ. ಪುತ್ತೂರು ತಾಲೂಕು, ಇಚ್ಲಂಪಾಡಿಯ ಶ್ರೀ ಹರಿಶ್ಚಂದ್ರ ಶೆಟ್ಟಿಯವರ ತೋಟದಿಂದ ಈ ವರ್ಷ ಸುಮಾರು 1 ಲಕ್ಷದಷ್ಟು ಅಡಿಕೆ ಬೀಜಗಳು ತಮಿಳುನಾಡು ಕಡೆಯ ನರ್ಸರಿಗಳಿಗೆ ಮಾರಾಟವಾಗಿದೆಯಂತೆ. ಹಾಗೆಯೇ ಇತರ ಬೆಳೆಗಾರರ ತೋಟದಿಂದ ಮಾರಾಟವಾದ ಬೀಜದ ಅಡಿಕೆಯ ಬಗ್ಗೆ ಮಾಹಿತಿ ಇಲ್ಲ.

ಅದರಂತೆ ಅಡಿಕೆಯ ಉತ್ಪಾದನೆಯೂ ಹೆಚ್ಚುತ್ತಿದೆ. ಕಳೆದ ಕೆಲವು ವರ್ಷಗಳಿಗೆ ಹಿಂದೆ ರೈತರು ಅಡಿಕೆ ಮರಗಳಿಗೆ ಹೆಚ್ಚೇನೂ ಗೊಬ್ಬರ ಕೊಡುತ್ತಿರಲಿಲ್ಲ. ವರ್ಷಕ್ಕೊಮ್ಮೆ ಲಭ್ಯವಿರುವಷ್ಟು ಕೊಟ್ಟಿಗೆ ಗೊಬ್ಬರ, ಸ್ವಲ್ಪ ರಾಸಾಯನಿಕ ಗೊಬ್ಬರ, ನೀರು ಬಿಟ್ಟರೆ ಅಂತಹ ಆರೈಕೆ ಇರಲಿಲ್ಲ. ಆದರೆ ಈಗ ಹಾಗಿಲ್ಲ. ಮರಕ್ಕೆ ಕನಿಷ್ಟ 2-3 ಕಿಲೋ ಅಡಿಕೆ ಉತ್ಪಾದನೆ ಮಾಡಬೇಕು ಎಂಬ ಗುರಿ ಇರಿಸಿಕೊಂಡು ಅದಕ್ಕನುಗುಣವಾಗಿ ಆರಿಕೆಯನ್ನೂ ಮಾಡುತ್ತಿದ್ದಾರೆ. ಬೇರೆ ಬೇರೆ ಗೊಬ್ಬರಗಳ ಮೂಲಕ ಇಳುವರಿಯೂ ಹಿಂದಿನ ಹತ್ತು ವರ್ಷಗಳಿಗೆ ಹೋಲಿಸಿದರೆ 50% ಹೆಚ್ಚಳವಾಗಿದೆ. ಕರಾವಳಿಯ ಜಿಲ್ಲೆಗಳಲ್ಲಿ ಹಿಂದೆ ಪ್ರತೀ ಮರದ ಸರಾಸರಿ ಇಳುವರಿ 1 ಕಿಲೋ ದಷ್ಟು ಇತ್ತು. ಈಗ ಅದು 1.5 ರಿಂದ 2 ಕಿಲೋ ತನಕ ತಲುಪಿದೆ. ಮಲೆನಾಡು (ಶಿರಸಿ, ಶಿವಮೊಗ್ಗ, ಹೊಸನಗರ, ತೀರ್ಥಹಳ್ಳಿ, ಕೊಪ್ಪ) ಕಡೆ ಹಿಂದೆ ಮರವೊಂದರ ಸರಾಸರಿ 1.5 ಕಿಲೋದಿಂದ 2 ಕಿಲೋ ತನಕ (ಕೆಂಪು) ಅಡಿಕೆ ಉತ್ಪಾದನೆಯಾಗುತ್ತಿದ್ದುದು, ಈಗ 2.5 ರಿಂದ 3 ಕಿಲೋ ತನಕ ತಲುಪಿದೆ. ಇದರಿಂದಾಗಿ ಇರುವ ಬೆಳೆ ಪ್ರದೇಶದಲ್ಲೇ 25% ಬೆಳೆ ಹೆಚ್ಚಳವಾಗಿದೆ ಎನ್ನುತ್ತಾರೆ ಕೆಲವು ಪ್ರಗತಿಪರ ರೈತರು. ಇದೆಲ್ಲವನ್ನೂ ಮಾರುಕಟ್ಟೆ ಸಹಿಸಿಕೊಂಡು ಇನ್ನೂ ಅಡಿಕೆಗೆ ಉತ್ತಮ ಬೇಡಿಕೆಯೇ ಇದೆ ಎಂದಾದರೆ ಅಡಿಕೆಗೆ ಭವಿಷ್ಯ ಇಲ್ಲ ಎಂಬ ಮಾತಿನಲ್ಲಿ ಯಾವುದೇ ಭರವಸೆ ಇಲ್ಲ. ಬೇರೆ ಲಾಭದಾಯ ಬೆಳೆ ಬೆಳೆಸುವರೇ ಅವಕಾಶ ಇರುವವರನ್ನು ಹೊರತುಪಡಿಸಿ ಉಳಿದವರಿಗೆ ಅಡಿಕೆಯೇ ಸದ್ಯದ ಸ್ಥಿತಿಯಲ್ಲಿ ಲಾಭದಾಯಕ ಬೆಳೆಯಾಗಿದೆ. ಕರಾವಳಿ ಮಲೆನಾಡಿನ ರೈತರಿಗೆ ಅಡಿಕೆ ಅಲ್ಲದೆ ಬೇರೆ ಬೆಳೆ ಆಯ್ಕೆ ಎಂದರೆ ಭತ್ತ ಮತ್ತು ತೆಂಗು,









ಗೇರು ಬೆಳೆಗಳು. ಎಲ್ಲರೂ ತುತ್ತಿಗಾಗಿ ಬಳಕೆ ಮಾಡುವ ಭತ್ತದ ಬೆಳೆಯ ಸ್ಥಿತಿಯಂತೂ ಚಿಂತಾಜನಕ. ಭತ್ತ ಬೆಳೆದರೆ ಎರಡು ಬೆಳೆಗಳಲ್ಲಿ ಬರುವ ಉತ್ಪಾದನೆ ಗರಿಷ್ಟ 50 ಕ್ವಿಂಟಾಲು ಭತ್ತ. ಇದರ ಮೌಲ್ಯ ಏನಿದ್ದರೂ 90,000 ದಷ್ಟು. ಉಳಿದಂತೆ ಹುಲ್ಲು ಮಾರಾಟದಿಂದ 10,000 ಸಂಪಾದನೆಯಾದರೆ ಒಟ್ಟು ಸುಮಾರು ಒಂದು ಲಕ್ಷ ಭತ್ತದ ಹೊಲದಲ್ಲಿನ ಹುಟ್ಟುವಳಿ. ಇದಕ್ಕೆ ಮಾಡುವ ಖರ್ಚುಗಳ ಲೆಕ್ಕಾಚಾರ ಹಾಕಿದರೆ ಅದರಲ್ಲಿ ಉಳಿಕೆ ಪ್ರಮಾಣ ಏನೇನೂ ಇಲ್ಲ. ಆದ ಕಾರಣ ಉಳಿದ ಯಾವುದೇ ಬೆಳೆಯನ್ನು ಬೆಳೆಸುವುದು ಅಸಾಧ್ಯವೆಂದಿರುವ ಜಾಗದಲ್ಲಿ ಮಾತ್ರವೇ ಭತ್ತದ ಬೆಳೆಯನ್ನು ಬೆಳೆಸಲಾಗುತ್ತಿದೆ. ಅಡಿಕೆ ಬೆಳೆ ಹಾಗಿಲ್ಲ. ಒಂದು ಎಕ್ರೆಯಲ್ಲಿ ಏನಿಲ್ಲವೆಂದರೂ 10 ಕ್ವಿಂಟಾಲು ಅಡಿಕೆ ಉತ್ಪಾದನೆ ಸಾಧ್ಯ. ಪ್ರಾದೇಶಿಕತೆಯನ್ನು ಹೊಂದಿಕೊಂಡು ಇದು ಇನ್ನೂ ಹೆಚ್ಚಳವಾಗುತ್ತದೆ. ತೆಂಗಿನ ಕತೆಯೂ ಹಾಗೆಯೇ. ಒಂದು ಮರಕ್ಕೆ 100 ಕಾಯಿ ದೊರೆತರೂ ಮರದ ಉತ್ಪಾದಕತೆ 1000 ರೂ ಮಾತ್ರ. ಎಕ್ರೆಗೆ 80 ಮರದಲ್ಲಿ 80,000 ಬಂದರೆ ಸಾಕಾಗದು. (ಈಗ ಪ್ರಸ್ತುತ ತೆಂಗಿನ ಕಾಯಿಗೆ ಬೆಲೆ ಇದ್ದರೂ ಲಭ್ಯತೆ ಕಡಿಮೆ ಇದೆ) ಇದರ ಬೆಲೆ ಅಸ್ಥಿರತೆ ಬಗ್ಗೆ ರೈತರಲ್ಲಿ ಅಂಜಿಕೆ ಇದೆ. ಗೇರು ಬೆಳೆಯಲ್ಲಿ ಖರ್ಚು ಕಡಿಮೆ ಆದಕ್ಕನುಗುಣವಾಗಿ ಲಾಭವಿದೆ, ಆದರೆ ಅದನ್ನು ಎಲ್ಲಾ ಭಾಗದಲ್ಲೂ ಬೆಳಸಲು ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಲ್ಲಿ ನೋಡಿದರೆ ವಾರ್ಷಿಕ ಈಗಿನ ಧಾರಣೆಯಲ್ಲಿ ಏನಿಲ್ಲವೆಂದರೂ 2,00,000 ವರಮಾನ ತಂದುಕೊಡಬಲ್ಲ ಬೆಳೆ ಎಂದರೆ ಅಡಿಕೆ ಮಾತ್ರ. ಇದನ್ನು ಮನಗಂಡೇ ರೈತರು ಅಡಿಕೆ ಬೆಳೆ ಪ್ರದೇಶವನ್ನು ಹೆಚ್ಚಿಸುತ್ತಿರುವುದು. ಅಡಿಕೆಯೊಂದಿಗೆ ಮಿಶ್ರ ಬೆಳೆ ಸಾಧ್ಯ. ಈ ಮಿಶ್ರ ಬೆಳೆಗಳಿಂದ ಏನಿಲ್ಲವೆಂದರೂ ವಾರ್ಷಿಕ 1 ಲಕ್ಷ ಉತ್ಪಾದನೆ ಮಾಡಬಹುದಾಗಿದೆ. ಆದ ಕಾರಣ ಸದ್ಯಕ್ಕೆ ಅಡಿಕೆಗೆ ಸರಿಸಾಟಿಯಾದ ಆದಾಯ ತಂದು ಕೊಡಬಲ್ಲ ಬೆಳೆ ಬೇರೆ ಇಲ್ಲ.

ಅಡಿಕೆಯನ್ನು ಈಗಿನ ವರೆಗೂ ಬರೇ ತಿಂದು ಉಗುಳುವ ಅಭ್ಯಾಸಕ್ಕಾಗಿಯೇ ಉಪಯೋಗಿಸಲಾಗುತ್ತಿದೆ. ಇದನ್ನು ತಂಬಾಕಿನ ಜೊತೆಗೆ ಅತ್ಯಧಿಕ ಪ್ರಮಾಣದಲ್ಲಿ ಬಳಕೆ ಮಾಡಲಾಗುತ್ತದೆ. ತಂಬಾಕನ್ನು ಜಗಿಯುವುದಕ್ಕಾಗುವುದಿಲ್ಲ. ಅದಕ್ಕೆ ಜಗಿಯಲು ಅನುಕೂಲವಾಗುವಂತೆ ಅಡಿಕೆಯನ್ನು ಸೇರಿಸಲಾಗುತ್ತದೆ. ಅಡಿಕೆಯಲ್ಲಿ ಯಾವುದೇ ಮತ್ತು ಕೊಡುವ ಪದಾರ್ಥ ಇರುವುದಿಲ್ಲ. ಆದರೂ ಅಡಿಕೆಯನ್ನೇ ವೀಳ್ಯದೆಲೆ ಜಗಿಯಲು, ಗುಟ್ಕಾ ತಯಾರಿಕೆಗೆ , ಪಾನ್ ಬೀಡಾಗಳಿಗೆ ಬಳಕೆ ಮಾಡಲಾಗುತ್ತದೆ. ಗುಟ್ಕಾ ಎಂಬ ಸಿದ್ದ ಉತ್ಪನ್ನ ಬಂದ ತರುವಾಯ ಅಡಿಕೆಯ ಮಾರುಕಟ್ಟೆಗೆ ಒಂದು ಆಯಾಮ ದೊರೆಯಿತು ಎನ್ನಬಹುದು. ಇದು ಸುಮಾರು 1988-90 ನೇ ಇಸವಿಯ ನಂತರ. ಅದಕ್ಕೆ ಹಿಂದೆ ನಮ್ಮ ದೇಶದಲ್ಲಿ ವೀಳ್ಯದೆಲೆಯೊಂದಿಗೆ ಜಗಿಯಲು ಬಳಕೆ ಮಾಡುತ್ತಿದ್ದರು. ಬಹುತೇಕ ಅಡಿಕೆ ಪಾನ್ ಬೀಡ ತಯಾರಿಸುವ ಅಂಗಡಿಗಳ ಮೂಲಕವೇ ವಿಕ್ರಯವಾಗುತ್ತಿತ್ತು. ಸರಕಾರಕ್ಕೆ ಇದರಿಂದ ಸಮರ್ಪಕ ಲೆಕ್ಕಾಚಾರ ದೊರೆಯದೆ ಆದಾಯವವೂ ಇರಲಿಲ್ಲ. ಗುಟ್ಕಾ ಬಂದ ನಂತರ ಬಹುತೇಕ ಕೆಂಪಡಿಕೆ, ಒಡೆದ ಅಡಿಕೆ , ಸಿಪ್ಪೇ ಗೋಟು ಕರಿ ಗೋಟು ಎಲ್ಲವೂ ಗುಟ್ಕಾ ತಯಾರಿಕೆಗೆ ಬಳಕೆಯಾಗಿ ಗುಟ್ಕಾ ಉತ್ಪಾದನೆಗೆ ದೇಶದಾದ್ಯಂತ ಹತ್ತಾರು ದೈತ್ಯ ಕಂಪೆನಿಗಳು ಹುಟ್ಟಿಕೊಂಡವು. ಇಂದು ಉತ್ತಮ ಗುಣಮಟ್ಟದ ಚಾಲೀ ಅಡಿಕೆ ಮತ್ತು 5-10 % ಉತ್ಕೃಷ್ಟ ಗುಣಮಟ್ಟದ ಕೆಂಪಡಿಕೆ ಹೊರತಾಗಿ ಉಳಿದೆಲ್ಲಾ ತರಾವಳಿಯ ಅಡಿಕೆಯೂ ಗುಟ್ಕಾ ತಯಾರಿಕೆಗೇ ಬಳಸಲ್ಪಡುತ್ತದೆ.

ಅಡಿಕೆಯನ್ನು ಕರ್ನಾಟಕದಲ್ಲಿ ಅತ್ಯಧಿಕ ಪ್ರಮಾಣದಲ್ಲೂ ನಂತರ ಕೇರಳ, ಆನಂತರ ಮಹಾರಾಷ್ಟ್ರ, ಅಸ್ಸಾಂ ಈಗ ತಮಿಳುನಾಡಿನಲ್ಲೂ ಬೆಳೆಯುತ್ತಿದ್ದು, ಇಷ್ಟೂ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಅಡಿಕೆ ಸಾಕಾಗದೆ ಬೇರೆ ದೇಶಗಳಿಂದಲೂ ಅಡಿಕೆಯನ್ನು ಆಮದು ಮಾಡಿ ಈ ಮೇಲಿನ ಬಳಕೆಗೆ ಬೇಕಾದ ಅಡಿಕೆಯ ಬೇಡಿಕೆಯನ್ನು ಪೂರೈಸಲಾಗುತ್ತದೆ. ಒಂದು ಲೆಕ್ಕಾಚಾರ ಪ್ರಕಾರ ಕರ್ನಾಟಕಕ್ಕೆ ದಿನಕ್ಕೆ 4 ಲೋಡು ಗುಟ್ಕಾ ಬೇಕಾಗುತ್ತದೆಯಂತೆ. ಅದೇ ರೀತಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿಯೂ ಇದರ ಬಳಕೆ ಇದ್ದು, ಗುಟ್ಕಾ ಹೊರತಾಗಿ ದೇಶದಾದ್ಯಂತ ಪಾನ್ ಬೀಡಾ ತಯಾರಿಸಿಕೊಡುವ ಲಕ್ಷಾಂತರ ಅಂಗಡಿಗಳು ಇವೆ. ಈ ಅಂಗಡಿಗಳಿಗೆ ದಿನಕ್ಕೆ ಏನಿಲ್ಲವೆಂದರೂ ಸರಾಸರಿ 2-3 ಕಿಲೋ ಅಡಿಕೆಯಾದರೂ ಬೇಕಾಗುತ್ತದೆ. ಅಹಮದಾಬಾದ್ ಪಟ್ಟಣದ ಸುತ್ತಮುತ್ತ ಸುಮಾರು 200 ಕ್ಕೂ ಹೆಚ್ಚು ಪಾನ್ ಬೀಡಾ ಅಂಗಡಿಗಳು ಇವೆ. ಅದೇ ರೀತಿ ಇನ್ನಿತರ ಜಿಲ್ಲಾ ಕೇಂದ್ರ, ಹಾಗೂ ತಾಲೂಕು ಮತ್ತು ಇನ್ನಿತರ ಕಡೆಗಳಲ್ಲಿ ಏನಿಲ್ಲವೆಂದರೂ 2000 ಕ್ಕೂ ಮಿಕ್ಕಿ ಪಾನ್ ಮಸಾಲಾ ತಯಾರಿಸಿಕೊಡುವ ಅಂಗಡಿಗಳಿವೆ. ಅದೇ ರೀತಿ ಮಧ್ಯ ಪ್ರದೇಶ, ಮಹಾರಾಷ್ಟ್ರ ಎಲ್ಲಾ ಕಡೆಯಲ್ಲೂ ಸಾವಿರಾರು ಸಂಖ್ಯೆಯ ಪಾನ್ ಮಸಾಲಾ ಅಂಗಡಿಗಳ ಮೂಲಕ ಅಡಿಕೆ ಬಳಕೆಯಾಗುತ್ತಿದೆ.

ಕೆಂಪಡಿಕೆಯಾಗಲೀ, ಚಾಲಿ ಅಡಿಕೆಯಾಗಲೀ ಬಹುತೇಕ ಬಳಕೆಯಾಗುವುದು ಗುಟ್ಕಾ ತಯಾರಿಕೆಗೆ. ಗುಟ್ಕಾ ಮಾರುಕಟ್ಟೆ ಅತೀ ದೊಡ್ಡದಾಗಿದ್ದು ಇದನ್ನು ನಿಯಂತ್ರಣಕ್ಕೆ ತರುವುದು ತುಂಬಾ ಕಷ್ಟದ ಕೆಲಸವಾಗಿರುತ್ತದೆ. ಗುಟ್ಕಾ ನಿಷೇಧ ಆದರೆ ಮತ್ತೊಂದು ವಿಧದಲ್ಲಿ ಅಡಿಕೆಯ ಬಳಕೆ ಆಗುತ್ತದೆ. ಬಹುಷಃ ಗುಟ್ಕಾ ನಿಷೇಧ ಎಂಬುದು ಸಾಧ್ಯವಿಲ್ಲದ ಮಾತು. ಈಗಾಗಲೇ ಇದನ್ನು ಕೆಲವು ರಾಜ್ಯ ಸರಕಾರಗಳು ಪ್ರಯೋಗ ಮಾಡಿ ನೋಡಿ ಇದರಿಂದ ಪ್ರಯೋಜನವಾಗದ ಕಾರಣ ನಿಷೇಧವನ್ನು ಮತ್ತೆ ಹೇರಲು ಮುಂದಾಗಿಲ್ಲ. ಇಷ್ಟಕ್ಕೂ ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಗುಟ್ಕಾ ಹಾನಿಕವೆಂದರೂ ಅದನ್ನು ಬಳಕೆ ಮಾಡುವ ಜನ ಬಳಸುತ್ತಲೇ ಇದ್ದಾರೆ. ಅಡಿಕೆಗೆ ಎಲ್ಲಿಯ ತನಕ ಭವಿಷ್ಯವಿದೆ ಎಂದರೆ ಜನ ಯಾವಾಗ ಗುಟ್ಕಾ ಪಾನ್ ಮಸಾಲಾ ಜಗಿಯುವ ಹವ್ಯಾಸವನ್ನು ಬಿಡುತ್ತಾರೆಯೋ ಆ ತನಕ ಇದಕ್ಕೆ ಬೇಡಿಕೆ ಇದೆ. ಅಡಿಕೆಯನ್ನು ಪರ್ಯಾಯ ಬಳಕೆಗೆ ಉಪಯೋಗಿಸುವುದರಲ್ಲಿ ಕೆಲವೊಂದು ಪ್ರಯತ್ನಗಳಾಗಿದ್ದರೂ ಸಹ ಅದು ಈಗ ಇರುವ ಉತ್ಪಾದನೆಯಲ್ಲಿ ಏನೇನೂ ಅಲ್ಲ. ಅದನ್ನು ಅವಲಂಬಿಸಿ ಮಾರುಕಟ್ಟೆಯಲ್ಲಿ ಅಂತಹ ಬದಲಾವಣೆಯನ್ನು ನಿರೀಕ್ಷಿಸುವಂತಿಲ್ಲ. ಏನಿದ್ದರೂ ತಿಂದು ಉಗುಳುವುದೇ ಈ ತನಕದ ಬಳಕೆ. ಸರಕಾರ ಅಡಿಕೆಯನ್ನು ನಿಷೇಧಿಸಲಿದೆಯೇ ಈ ಬಗ್ಗೆ ಜನರಲ್ಲಿ ಕೆಲವೊಂದು ಆತಂಕಗಳು ಇದೆ. ಸರಕಾರ ಈ ಕುರಿತಾಗಿ ಒಮ್ಮೊಮ್ಮೆ ಸದ್ದೆಬ್ಬಿಸುತ್ತದೆ ಸಹ. ಆದರೆ ಅಡಿಕೆಯನ್ನು ನಿಷೇಧಿಸುವುದೆಂದರೆ ಅಷ್ಟು ಸುಲಭದ ಮಾತಲ್ಲ. ಆದಾಗ್ಯೂ ಅಡಿಕೆ ಬೆಳೆಗಾರರು ತಮ್ಮ ಚಿಂತನೆಯ ಒಂದು ಮೂಲೆಯಲ್ಲಿ ಅಡಿಕೆಯ ಮಾರುಕಟ್ಟೆ ಕುಸಿತವಾದರೆ ಮುಂದೇನು ಎಂಬ ಬಗ್ಗೆ ಯೋಚನೆ ಹೊಂದಿರಲೇ ಬೇಕು. ಸರಕಾರ ಒಂದೋ ತಂಬಾಕನ್ನು ನಿಷೇಧ ಮಾಡುತ್ತದೆ. ಇಲ್ಲವೇ ಅಡಿಕೆಯ ಬೆಲೆ ಕುಸಿತವಾಗುವ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಇದಕ್ಕೆ ಕಾರಣ ಅಭಿವೃದ್ದಿ ಹೊಂದಿದ ದೇಶಗಳ ಒತ್ತಾಯ ಮತ್ತು ಜಾಗತಿಕ ಆಹಾರ ಸಂಸ್ಥೆಯ ಒತ್ತಡ ಕಾರಣವಾಗುತ್ತದೆ.

ಕಾಫಿಯ ಬೆಳೆ ಕುಸಿತವಾಗಿ ಸುಮಾರು 10 ವರ್ಷಗಳೇ ಆಗಿವೆ. ಕಳೆದ 10 ವರ್ಷಗಳಿಂದ ಏರಿಕೆಯಾಗದೇ ಇದ್ದ ಕಾಫಿ ದರ ಗಗನಕ್ಕೇರಿದೆ. ಇದಕ್ಕೆ ಕಾರಣ ಕಾಫೀ ಬೆಳೆಯ ಪ್ರದೇಶಗಳು ಹೆಚ್ಚಳವಾಗುವುದು ಸ್ಥಗಿತವಾಗಿದೆ. ಕಾಫೀ ಬೆಳೆಗಾರರು ಕರಿಮೆಣಸನ್ನು ನಂಬಿ ಕಾಫಿ ಬೆಳೆಸುತ್ತಿದ್ದು, ಕಾಫಿ ಬೆಳೆಯುವಲ್ಲಿರುವ ಸಮಸ್ಯೆಗಳ ಕಾರಣ ಕಾಫಿಗೆ ಬೆಲೆ ಇದ್ದರೂ ಅಡಿಕೆ ಬೆಳೆಯಲು ಮುಂದಾಗುತ್ತಿದ್ದಾರೆ. ಬಹಳಷ್ಟು ಕಾಫಿ ಬೆಳೆಗಾರರು ಈಗ ಅಡಿಕೆ ಬೆಳೆಗಾರರಾಗುತ್ತಿದ್ದಾರೆ.

ಶುಂಠಿ ಬೆಲೆ ಕಳೆದ ಕೆಲವು ವರ್ಷಗಳಿಂದ ಉತ್ತಮವಾಗಿತ್ತು. ಇದರಿಂದಾಗಿ ಶುಂಠಿ ಬೆಳೆ ಪ್ರದೇಶ ಬಹಳಷ್ಟು ಹೆಚ್ಚಳವಾಯಿತು. ಮಲೆನಾಡಿನ ಭಾಗದಿಂದ ಬಯಲುನಾಡಿನವರೆಗೂ ಶುಂಠಿ ಬೆಳೆ ವಿಸ್ತರಿಸಲ್ಪಟ್ಟಿತು. ಆದರೆ ಈಗ ಶುಂಠಿಯ ಬೆಲೆಯೂ ಕುಸಿಯುವ ಭೀತಿಯಲ್ಲಿದೆ. ಶುಂಠಿ ಬೆಳೆಸುವ ರೈತರೂ ಅಡಿಕೆ ಬೆಳೆಯತ್ತ ಗಮನ ಹರಿಸುತ್ತಿದ್ದಾರೆ.

ಇದೆಲ್ಲಾ ಅಡಿಕೆ ಬೆಳೆಯ ಪ್ರದೇಶ ವಿಸ್ತರಣೆಗೆ ಅನುಕೂಲಮಾಡಿಕೊಡುತ್ತಿದೆ. ಅದಕ್ಕನುಗುಣವಾಗಿ ವಾರ್ಷಿಕ ಏನಿಲ್ಲವೆಂದರೂ 500 ಎಕ್ರೆಗೂ ಹೆಚ್ಚು ವಿಸ್ತೀರ್ಣದಲ್ಲಿ ಅಡಿಕೆ ಬೆಳೆ ಹೆಚ್ಚಳವಾಗಿ ವಾರ್ಷಿಕ ಕನಿಷ್ಟ 5000 ಕ್ವಿಂಟಾಲು ಅಡಿಕೆ ಉತ್ಪಾದನೆ ಹೆಚ್ಚಳವಾಗುತ್ತಿದೆ. ಇಷ್ಟು ಪ್ರಮಾಣದ ಅಡಿಕೆಯನ್ನು ಈಗಿನ ಬಳಕೆಗೆ ಉಪಯೋಗಿಸಲು ಸಾಧ್ಯವಿದೆಯೇ ಈ ಬಗ್ಗೆ ಬೆಳೆಗಾರರು ಯೋಚಿಸಬೇಕಾಗಿದೆ. ಅಡಿಕೆ ಉತ್ಪಾದನೆ ಹೆಚ್ಚಿದಂತೆ ಬೇಡಿಕೆ ಕಡಿಮೆಯಾಗುತ್ತಾ ಬೆಲೆ ಕಡಿಮೆಯಾಗುತ್ತದೆ. ಆದರೆ ಉತ್ಪಾದನಾ ವೆಚ್ಚ ಮಾತ್ರ ಹೆಚ್ಚಳವಾಗುತ್ತಿರುತ್ತದೆ. ಅಡಿಕೆ ನಿಷೇಧ ಖಂಡಿತವಾಗಿಯೂ ಯಾವುದೇ ಸರಕಾರಗಳೂ ಮಾಡುವುದಿಲ್ಲ. ಕಾರಣ ಇದರಲ್ಲಿ ಬರೇ ರೈತರು ಮಾತ್ರ ಭಾಗಿಗಳಲ್ಲ. ಕನಿಷ್ಟ 100 ಜನ ಬೆಳೆಗಾರರಿಗೆ 1 ವರ್ತಕ, 1 ಒಳಸುರಿ ಪೂರೈಕೆದಾರ, ಒಬ್ಬ ಬೆಳೆಗಾರನ ಸುತ್ತ ಸುಮಾರು 2 ಮೂರು ಜನ ಕೆಲಸದವರು ಸೇರಿ ಅಡಿಕೆ ಬೆಳೆಯಲಾಗುವ ಪ್ರದೇಶದಾದ್ಯಂತ 25-30 % ಕ್ಕೂ ಹೆಚ್ಚಿನ ಜನ ಅಡಿಕೆ ಬೆಳೆಯನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅವಲಂಭಿಸಿರುವ ಕಾರಣ ಅಡಿಕೆ ಬೆಳೆಯನ್ನು ನಿಷೇಧಿಸುವುದು ಅಷ್ಟು ಸುಲಭದ ಮಾತಲ್ಲ. ಅದರ ಬದಲಿಗೆ ಕೆಲವೊಂದು ಋಣಾತ್ಮಕ ತಡೆಗಳನ್ನು ಸರಕಾರ ಮಾಡಬಹುದು. ಅಂಥಹ ಸಾಧ್ಯತೆಗಳಲ್ಲಿ ಕೆಲವು ಇವು. ಗುಟ್ಕಾ ನಿಷೇಧ ಮಾಡಬಹುದು. ಸರಕಾರ ಗುಟ್ಕಾ ನಿಷೇಧ ಮಾಡಿದರೆ ಅದರ ಬದಲಿಗೆ ತಿನ್ನುವವರು ಬೇರೆ ವಿಧದಲ್ಲಿ ತಂಬಾಕು- ಅಡಿಕೆಯನ್ನು ಬಳಕೆ ಮಾಡುತ್ತಾರೆ. ಆಗ ಸ್ವಲ್ಪ ಮಟ್ಟಿಗೆ ಬಳಕೆ ಕಡಿಮೆಯಾಗಬಹುದಾದರೂ, ಇದು ಅಡಿಕೆ ಮಾರುಕಟ್ಟೆಯ ಮೇಲೆ ಇದು ದೊಡ್ಡ ಹೊಡೆತವನ್ನು ಉಂಟುಮಾಡುತ್ತದೆ. ಅಡಿಕೆಯ ಬೆಲೆ ಕಡಿಮೆಯಾಗುತ್ತದೆ. ಇದರಿಂದಾಗಿ ಅಡಿಕೆಯ ಕೃಷಿಯ ಮೇಲೆ ಆಸಕ್ತಿ ಕಡಿಮೆಯಾಗಿ ಉತ್ಪಾದನೆ ಸ್ವಲ್ಪ ಸ್ವಲ್ಪವೇ ಕಡಿಮೆಯಾಗುತ್ತಾ ಬರುತ್ತದೆ.

ತಂಬಾಕು ನಿಷೇಧ ಮಾಡಬಹುದು: ಈಗ ದೇಶದಾದ್ಯಂತ ತಂಬಾಕು ಮಂಡಳಿಯ ನಿರ್ದೇಶನದ ಮೇರೆಗೆ ಎಷ್ಟು ಬೇಡಿಕೆ ಇದೆಯೋ ಅಷ್ಟು ತಂಬಾಕನ್ನು ನೊಂದಾಯಿತ ಕೃಷಿಕರ ಮೂಲಕ ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರವೇ ಬೆಳೆಸಲಾಗುತ್ತದೆ. ಇದನ್ನು ಕೊಳ್ಳುವುದು ತಂಬಾಕು ಮಂಡಳಿಯವರು. ಸಿಗರೇಟು, ಬೀಡಿ, ಪಾನ್ ತಂಬಾಕು ಈ ಮುಂತಾದ ಉದ್ದೇಶಕ್ಕೆ ಬಳಕೆಯಾಗುವ ತಂಬಾಕು ಬೇರೆ ಬೇರೆ ಇರುತ್ತದೆ. ಇದನ್ನು ತಂಬಾಕು ಮಂಡಲಿಯ ನಿರ್ದೇಶನದ ಮೇಲೆಯೇ ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಸಲಾಗುತ್ತದೆ. ಇದನ್ನು ನಿಷೇಧ ಮಾಡುವುದು ಸುಲಭ. ಇದು ಬಹುವಾರ್ಷಿಕ ಬೆಳೆಯಲ್ಲ. ಈ ಬೆಳೆಯಲ್ಲಿ ಎಕ್ರೆಗೆ ರೈತ 1 ಲಕ್ಷ ತನಕವೂ ಸಂಪಾದನೆ ಮಾಡಬಹುದು. ಒಂದು ವೇಳೆ ತಂಬಾಕನ್ನು ನಿಷೇಧ ಮಾಡಿದರೆ ಆ ಪ್ರದೇಶದ ರೈತರು ಅದರ ಬದಲಿಗೆ ಬೇರೆ ಬೆಳೆ ಬೆಳೆಯಬಹುದು. ಅಷ್ಟೇ ಉತ್ಪಾದನೆ ತಂದು ಕೊಡಬಲ್ಲ ಬೇರೆ ಬೆಳೆಗಳೂ ಸಹ ಇವೆ. ಅಡಿಕೆ ಕ್ಯಾನ್ಸರ್ ಕಾರಕ ಎಂಬುದನ್ನು ಎತ್ತಿ ಹಿಡಿಯಬಹುದು. ತಾಜಾ ಅಡಿಕೆ ಅಥವಾ ರೈತರು ಸುರಕ್ಷಿತವಾಗಿ ದಾಸ್ತಾನು ಇಟ್ಟ ಅಡಿಕೆ ಯಾವುದೇ ಹಾನಿಕಾರಕ ಅಂಶಗಳನ್ನು ಹೊಂದದೆ ಇರಬಹುದು. ಆದರೆ ಅದು ಗ್ರಾಹಕರಿಗೆ ತಲುಪುವ ಹಂತಕ್ಕೆ ಮುಟ್ಟುವಾಗ ದಾಸ್ತಾನು ಲೋಪದಿಂದ ಅದರಲ್ಲಿ ಶಿಲೀಂದ್ರ ಬೆಳೆದು ಅದು ಆರೋಗ್ಯಕ್ಕೆ ಹಾನಿಕರವಾಗಿ ಪರಿಣಮಿಸಿ ಅದರಿಂದ ಬಾಯಿಯ ಕ್ಯಾನ್ಸರ್ ಗಂಟಲು ಕ್ಯಾನ್ಸರ್ ಬರಬಹುದು. ಈ ಅಂಶದ ಮೂಲಕ ಅಡಿಕೆ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಬಹುದು.

ಈ ಮೂರು ಅವಕಾಶಗಳ ಬಗ್ಗೆ ಸ್ವಲ್ಪ ಅಂಜಿಕೆ ಇದೆ. ಸರಕಾರ ಅಡಿಕೆ ಬೆಳೆಯ ಮೇಲೆ ಏನಾದರೂ ಕ್ರಮ ಕೈಗೊಳ್ಳುವುದೇ ಆಗಿದ್ದಲ್ಲಿ ಈ ಮೂರು ಬಲವಾದ ಅವಕಾಶಗಳು ಇವೆ. ಉಳಿದ ಅವಕಾಶಗಳೆಂದರೆ, ಅಡಿಕೆ ಬೆಳೆ ಸಂಶೋಧನೆಗೆ ಅನುದಾನ ನಿಲ್ಲಿಸಬಹುದು: ಅಡಿಕೆಯ ತಳಿ ಸುಧಾರಣೆ, ರೋಗ ಕೀಟ ಬಾಧೆ ನಿಯಂತ್ರಣ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಸಂಶೋಧನಾ ಕೇಂದ್ರಗಳಿಗೆ ಅನುದಾನವನ್ನು ಕಡಿಮೆ ಮಾಡುತ್ತಾ ಬೆಳೆ ಹೆಚ್ಚಾಗದಂತೆ ನಿಯಂತ್ರಣ ಮಾಡಬಹುದು.

ಬೆಳೆ ಒಳಸುರಿಗಳಿಗೆ ಸಹಾಯಧನ ನಿಲ್ಲಿಸಬಹುದು. ಹೊಸ ಪ್ರದೇಶ ವಿಸ್ತರಣೆಗೆ ತಡೆ ಹಾಕಬಹುದು. ಇವುಗಳಿಂದ ತಪ್ಪಿಸಿಕೊಳ್ಳಲು ನಮ್ಮಲ್ಲಿ ಸಾಕಷ್ಟು ಅವಕಾಶಗಳು ಇವೆ. ಇವುಗಳ ಹೊರತಾಗಿ ಬೆಳೆ ನಿಲ್ಲಿಸಲು ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ. ಇದು ಯಾವುದೂ ಅಡಿಕೆ ಬಳಕೆಯ ಮೇಲೆ ಅಂಥಹ ಪರಿಣಾಮವನ್ನು ಉಂಟು ಮಾಡಲಾರದು. ಇಂದು ಅಡಿಕೆ ಮಾರುಕಟ್ಟೆ ಎಂಬುದು ಕೆಲವೊಂದು ಸೆಂಟಿಮೆಂಟ್ ಆಧಾರದಲ್ಲಿ ನಡೆಯುತ್ತಿದೆ. ಕೆಲವೊಮ್ಮೆ ಉತ್ಪಾದನೆ ಹೆಚ್ಚು ಇದ್ದರೂ ಬೆಲೆ ಉತ್ತಮವಾಗಿಯೇ ಇರುತ್ತದೆ. ಬೆಳೆ ಕಡಿಮೆ ಇದ್ದಾಗ್ಯೂ ಬೆಲೆ ಕುಸಿತ ಉಂಟಾಗುತ್ತದೆ. ಇದೆಲ್ಲಾ ವರ್ತಕರು ಮಾಡುವ ವ್ಯವಹಾರ ಚಾಣಕ್ಯತೆ. ಗುಟ್ಕಾ ಉತ್ಪಾದನೆಗೆ ಈಗಿನ ಅಡಿಕೆ ಉತ್ಪಾದನೆ ಸಾಕಾಗುವುದಿಲ್ಲ. ಅದಕ್ಕಾಗಿಯೇ ಗುಟ್ಕಾ ತಯಾರಕರು ಕಳಪೆ ದರ್ಜೆಯ ಅಡಿಕೆಯನ್ನು (ಸಿಪ್ಪೆಗೋಟು, ಕರಿಗೋಟು, ಇನ್ನಿತರ ಅಡಿಕೆಯ ಬದಲಿಗೆ ಮಿಶ್ರಣ ಮಾಡುವ ಕಾಯಿಗಳು) ಅದರೊಂದಿಗೆ ಮಿಶ್ರಣ ಮಾಡುತ್ತಾರೆ.

## ಅಡಿಕೆಯ ಮಾರುಕಟ್ಟೆಗೆ ಒಂದು ಆಯಾಮ

- ಇದು ಸುಮಾರು 1988-90 ನೇ ಇಸವಿಯ ನಂತರ.
- ಅದಕ್ಕೆ ಹಿಂದೆ ನಮ್ಮ ದೇಶದಲ್ಲಿ ವೀಳ್ಯದೆಲೆಯೊಂದಿಗೆ ಜಗಿಯಲು ಬಳಕೆ ಮಾಡುತ್ತಿದ್ದರು.
- ಬಹುತೇಕ ಅಡಿಕೆ ಪಾನ್ ಬೀಡ ತಯಾರಿಸುವ ಅಂಗಡಿಗಳ ಮೂಲಕವೇ ವಿಕ್ರಯವಾಗುತ್ತಿತ್ತು.
- ಸರಕಾರಕ್ಕೆ ಇದರಿಂದ ಸಮರ್ಪಕ ಲೆಕ್ಕಾಚಾರ ದೊರೆಯದೆ ಆದಾಯವವೂ ಇರಲಿಲ್ಲ.
- ಗುಟ್ಕಾ ಬಂದ ನಂತರ ಬಹುತೇಕ ಕೆಂಪಡಿಕೆ, ಒಡೆದ ಅಡಿಕೆ , ಸಿಪ್ಪೇ ಗೋಟು ಕರಿ ಗೋಟು ಎಲ್ಲವೂ ಗುಟ್ಕಾ ತಯಾರಿಕೆಗೆ ಬಳಕೆಯಾಗಿ ಗುಟ್ಕಾ ಉತ್ಪಾದನೆಗೆ ದೇಶದಾದ್ಯಂತ ಹತ್ತಾರು ದೈತ್ಯ ಕಂಪೆನಿಗಳು ಹುಟ್ಟಿಕೊಂಡವು.
- ಇಂದು ಉತ್ತಮ ಗುಣಮಟ್ಟದ ಚಾಲೀ ಅಡಿಕೆ ಮತ್ತು 5-10 % ಉತ್ಕೃಷ್ಟ ಗುಣಮಟ್ಟದ ಕೆಂಪಡಿಕೆ ಹೊರತಾಗಿ ಉಳಿದೆಲ್ಲಾ ತರಾವಳಿಯ ಅಡಿಕೆಯೂ ಗುಟ್ಕಾ ತಯಾರಿಕೆಗೇ ಬಳಸಲ್ಪಡುತ್ತದೆ.

ರೈತರು ಯಾವ ರೀತಿ ಮುಂದಾಲೋಚನೆ ಮಾಡಬೇಕು: ಅಡಿಕೆ ಬೆಳೆಯ ಮೇಲೆ ಯಾವುದೇ ಕ್ರಮ ಕೈಗೊಂಡರೂ ಅದು ಬೆಳೆಗಾರರಿಗೆ ತೊಂದರೆಯಾದಂತೆ. ಇದನ್ನು ಪ್ರಜಾಪ್ರಭುತ್ವ ಆಡಳಿತವಿರುವ ಯಾವ ಆಡಳಿತಾರೂಢ ಸರಕಾರವೂ ಮಾಡುವ ಗೋಜಿಗೆ ಹೋಗುವುದಿಲ್ಲ. ಕೆಲವೊಂದು ಒತ್ತಡಗಳಿಗೆ ಮಣಿದು ಇಂಥಹ ಕೆಲವು ನಿರ್ಧಾರಗಳನ್ನು ತೆಗೆದುಕೊಂಡರೂ ಅದು ತಾತ್ಕಾಲಿಕವಾಗಿರುತ್ತದೆ. ತಂಬಾಕನ್ನು ನಮ್ಮ ದೇಶದಲ್ಲಿ ಬೆಳೆಯದಿದ್ದರೆ ಪ್ರಪಂಚದ ಕೆಲವು ಹಿಂದುಳಿದ ದೇಶಗಳಲ್ಲಿ ಬೆಳೆಸಬಹುದು. ಅಲ್ಲಿಂದ ಆಮದೂ ಮಾಡಲೂ ಬಹುದು. ಅದೇ ರೀತಿ ಅಡಿಕೆಯನ್ನೂ. ಆದ ಕಾರಣ ರೈತರು ಬೆಲೆ ಕುಸಿತ ಎಂಬ ಆಗಾಗ ಆಗುವ ಸಮಸ್ಯೆಗೆ ತಮ್ಮಲ್ಲೇ ಸಿದ್ದ ಉತ್ತರಗಳನ್ನು ಇಟ್ಟುಕೊಂಡು ರೈತರಾಗುವುದೇ ಜಾಣತನ.

ಅಡಿಕೆ ಬೆಳೆಯನ್ನೊಂದೇ ಬೆಳೆಸಬೇಡಿ. ಉಳಿದ ಬೆಳೆಗಳಿಗೂ ಅವಕಾಶಗಳನ್ನು ಇಟ್ಟುಕೊಳ್ಳಿ. 5 ಎಕ್ರೆ ಹೊಲ ಇರುವವರು ಕೇವಲ 3 ಎಕ್ರೆಯಲ್ಲಿ ಮಾತ್ರ ಅಡಿಕೆ ಬೆಳೆಯಿರಿ. ಉಳಿದ ಪ್ರದೇಶಗಳಲ್ಲಿ ವಿಭಾಗ ಮಾಡಿಕೊಂಡು ಇನ್ನಿತರ ಹೊಲಕ್ಕೆ ಹೊಂದುವ ಬೆಳೆಗಳನ್ನು ಬೆಳೆಸಬೇಕು. ಅಡಿಕೆ ತೋಟದಲ್ಲಿ ಮಿಶ್ರ ಬೆಳೆಗಳನ್ನು ಬೆಳೆಸಲು ಅವಕಾಶ ಹೆಚ್ಚಿರಬೇಕು. ಅಡಿಕೆಯ ಜೊತೆಗೆ ಕೊಕ್ಕೋ ಬೆಳೆಸುವುದರಿಂದ ಒಂದಷ್ಟು ವರಮಾನ ದೊರೆಯುತ್ತದೆ. ಜಾಯೀ ಕಾಯಿ ಬೆಳೆಸುವುದರಿಂದ ತೋಟದ ಒಳಗೆ ಗಾಳಿ ತಡೆ ಜೊತೆಗೆ ನೆರಳಿನ ವಾತಾವರಣ ಉಂಟಾಗಿ ಅಡಿಕೆಗೆ ಅನುಕೂಲವಾಗುತ್ತದೆ. ಒಂದು ಜಾಯೀ ಕಾಯಿ ಮರ ಗೇರು ಮರದಷ್ಟೇ ವರಮಾನವನ್ನು ತಂದು ಕೊಡಬಲ್ಲುದು.

ವೆನಿಲ್ಲಾ ಬೆಳೆಸಬಹುದು: ಒಮ್ಮೆ ವೆನಿಲ್ಲಾ ಬೆಳೆಯ ಬೆಲೆ ಕುಸಿತವಾಗಿ ಬೇಸರ ತಂದಿದ್ದರೂ ಸಹ ಈಗ ವೆನಿಲ್ಲಾ ಬೆಲೆ ಉತ್ತಮವಾಗಿದ್ದು, ಮೆಣಸು ಕೊಕ್ಕೋ, ಮುಂತಾದ ಎಲ್ಲಾ ಮಿಶ್ರ ಬೆಳೆಗಳಿಗಿಂತ ಲಾಭದಾಯಕವಾಗಿದೆ. ವೆನಿಲ್ಲಾದ ಈಗಿನ ಧಾರಣೆ ಅಡಿಕೆಯನ್ನೂ ಮಿಶ್ರ ಬೆಳೆ ಮಾಡುವಷ್ಟು ಇದೆ.

ಗೃಹ ಉದ್ದಿಮೆಯ ಮೂಲಕ ಅಡಿಕೆಯ ಮಾರುಕಟ್ಟೆ ಹೆಚ್ಚಿಸಬಹುದು: ಅಡಿಕೆಯನ್ನು ಬರೇ ತಂಬಾಕು ಜೊತೆ ತಿನ್ನುವುದು ಮಾತ್ರವಲ್ಲ. ಅದನ್ನು ಬೇರೆ ಬೇರೆ ಪಾಕದಲ್ಲಿ ಯಾವುದೇ ಹಾನಿಕಾರಕ ವಸ್ತುಗಳನ್ನು ಸೇರಿಸದೆ ಹಾಗೆಯೇ ಸಿಹಿಯ ಜೊತೆಗೆ ತಿನ್ನಲು ಬಳಕೆ ಮಾಡುತ್ತಾರೆ. ಇದೇನೂ ಸಣ್ಣ ಬಳಕೆ ಅಲ್ಲ. ದುರದೃಷ್ಟವೆಂದರೆ ಇಂದು ಬಳಕೆಯಲ್ಲಿರುವ ಈ ಸಿಹಿ ಸುಪಾರಿಯಲ್ಲಿನ ಸುಪಾರಿಯ ಗುಣಮಟ್ಟ ಮಾತ್ರ ಶೋಚನೀಯ. ಮದುವೆಯಲ್ಲಿ- ಉಪನಯನ- ಗೃಹ ಪ್ರವೇಶ ಮುಂತಾದ ಶುಭ ಸಮಾರಂಭಗಳಲ್ಲಿ ತಾಂಬೂಲವಾಗಿ ಒಂದೊಂದು ಕಡೆಗೆ ಕನಿಷ್ಟ 1 ಕಿಲೋ ಸಿಹಿ ಸುಪಾರಿ ಬೇಕಾಗುತ್ತದೆ. ಸಿಹಿ ಅಡಿಕೆಯಲ್ಲಿ ವೈವಿಧ್ಯಮಯ ತಯಾರಿಕೆಗಳಿವೆ. ಉತ್ತಮ ಗುಣಮಟ್ಟದ ಸಿಹಿ ಸುಪಾರಿಯನ್ನು ತಯಾರಿಸಿ ಮಾರುಕಟ್ಟೆ ಮಾಡುವ ಮೂಲಕ ರೈತರು ಮೌಲ್ಯವರ್ಧನೆಗೆ ತೊಡಗಿದರೆ ಭಾರೀ ಅವಕಾಶಗಳಿವೆ. ಅಡಿಕೆಯನ್ನು ಬೇರೆ ಬೇರೆ ಆಕಾರಗಳಲ್ಲಿ ಕತ್ತರಿಸುವ ಯಂತ್ರಗಳು ಈಗ ಲಭ್ಯ. ಇದು ಅತೀ ದೊಡ್ಡ ಮಾರುಕಟ್ಟೆ ಅವಕಾಶವನ್ನು ಹೊಂದಿದ್ದು ಭಾರತವಲ್ಲದೆ ಬೇರೆ ದೇಶಗಳಲ್ಲೂ ಮಾರುಕಟ್ಟೆ ಮಾಡಬಹುದಾದುದು.


ಅಡಿಕೆ ತೋಟದಲ್ಲಿ ಮರಮಟ್ಟು: ಅಡಿಕೆ ತೋಟದಲ್ಲಿ ಒಂದಷ್ಟು ಸಾಗುವಾನಿ ಸಸಿ ನೆಡುವುದು, ಹಲಸಿನ ಸಸಿ ನೆಡುವುದು ಮಾಡುವುದರಿಂದ ಅದು ಕೆಲವು ವರ್ಷಗಳ ನಂತರ ಉತ್ತಮ ಆದಾಯ ತಂದು ಕೊಡಬಲ್ಲ ಮರಮಟ್ಟು ಅಗುತ್ತದೆ. ನೀರಾವರಿ, ಗೊಬ್ಬರ ಮುಂತಾದ ಅನುಕೂಲತೆಯನ್ನು ಬಳಸಿಕೊಂಡು ಅದು ವೇಗವಾಗಿ ಬೆಳೆದು ಬೇಗ ಕಡಿಯಬಹುದಾದ ಮರಮಟ್ಟು ಆಗುತ್ತದೆ. ಅಡಿಕೆ ತೋಟದ ಬದುಗಳಲ್ಲಿ, ಎಡೆಯಲ್ಲಿ ಇದನ್ನು ಬೆಳೆಸುವುದರಿಂದ ನಷ್ಟ ಇಲ್ಲ. ಅರಣ್ಯ ಮರಮಟ್ಟುಗಳಾದ ಅಕೇಶಿಯಾ, ಸಾಗುವಾನಿ, ಮಹಾಗನಿ, ಹಲಸು, ಹೆಬ್ಬಲಸು ಮುಂತಾದ ಮರಮಟ್ಟುಗಳನ್ನು ಬೆಳೆಸುವುದರಿಂದ ಧೀರ್ಘಾವಧಿಯಲ್ಲಿ ಒಂದು ಆಸ್ತಿ ಸೃಷ್ಟಿಯಾಗುತ್ತದೆ. ಒಟ್ಟಿನಲ್ಲಿ ಅಡಿಕೆ ಬೆಳೆಗಾರರೆಲ್ಲರಿಗೂ ನಿತ್ಯ ಅಂಜಿಕೆಯಾಗಿ ಕಾಡುವ ಬೆಲೆ ಹೀಗೇ ನಿಲ್ಲಬಹುದೇ, ಕುಸಿತವಾದರೆ ಏನು ಗತಿ ಎಂಬ ಆತಂಕಕ್ಕೆ ಉತ್ತರವನ್ನು ಅವರೇ ಈಗಿಂದೀಗಲೇ ಅದೇ ಕೃಷಿಯಲ್ಲಿ ಹುಡುಕುವ ಪ್ರಯತ್ನ ಮಾಡಬೇಕಾಗಿದೆ. ಬೆಲೆ ಬಿದ್ದರೂ ಅಚ್ಚರಿ ಇಲ್ಲ. ಸ್ಥಿರವಾಗಿ ಉಳಿದರೂ ಅಚ್ಚರಿ ಇಲ್ಲ. ಎರಡಕ್ಕೂ ನಾವು ಸಿದ್ದರಿರಲೇ ಬೇಕು.

**- ರಾಧಾಕೃಷ್ಣ** ಹೊಳ್ಳ

# ಸಾಧ್ಯ ಮತ್ತು ಸಾಧನೆ

ಇಂದು ಸಾಧ್ಯ ಮತ್ತು ಸಾಧನೆ ಬಗ್ಗೆ ತಿಳಿದುಕೊಳ್ಳೋಣ. ನಾವು ಬಯಸಿದ್ದು ಸಿಕ್ಕಿದರೆ ಅದು ಸಾಧ್ಯ. ಆ ಸಾಧ್ಯ ಪಡೆದಾಗ ಆಗುವ ಆನಂದಕ್ಕಿಂತ ವಿಶೇಷವಾದ ಆನಂದ ಅದನ್ನು ಸಾಧನೆ ಮಾಡುವಾಗ ಆಗುತ್ತದೆ. ಸಾಧ್ಯತೆ ಪರಿಪೂರ್ಣಗೊಂಡರೆ ಸಾಧನೆ ತಾನಾಗೇ ಉಂಟಾಗುತ್ತದೆ. ಎಲ್ಲಿಯವರೆಗೆ ಸಾಧ್ಯತೆಯ ಬೆನ್ನಟ್ಟಿ ಸಾಗುತ್ತೇವೆಯೋ ಅಲ್ಲಿಯವರೆಗೆ ಸಾಧ್ಯ ದೂರ ಉಳಿಯುತ್ತದೆ. ಸಾಧ್ಯ ಅಂದರೆ ನಾವು ಯಾವುದನ್ನು ಪಡೆಯ ಬೇಕೊ ಅದು. ಯಾವುದರ ಉದ್ದೇಶಕ್ಕಾಗಿ ನಾವು ಮಾಡುತ್ತೀವಿ ಅದು ಸಾಧನೆ. ಸಾಧನೆ ಅಂತ್ಯವಾಗುವುದು ಸಾಧ್ಯದಲ್ಲಿ. ನಾವು ಸಾಧ್ಯದ ಕನಸು ಕಾಣುತ್ತೇವೆ. ಅದಕ್ಕೆ ಬಹಳ ಬೆಲೆ ಕೊಡುತ್ತೇವೆ. ಸದೈವ ಅದನ್ನೇ ಕುರಿತು ಚಿಂತಿಸುತ್ತೇವೆ. ಹಾಗಾಗಿ ಸಾಧ್ಯವನ್ನೇ ಕಳೆದುಕೊಳ್ಳುತ್ತೇವೆ. ನಾವು ಸಾಧನೆಯಲ್ಲಿ ಸಮಾಧಾನ ಪಡೆಯಬೇಕು. ವರ್ಷ ವರ್ಷ ಸಾಧನೆ ಇರಬಹುದು. ಅದರಲ್ಲೇ ಸಮಾಧಾನ ಪಡೆಯಬೇಕು. ಹೋಗಿ ಊರು ತಲುಪುವುದು ಎಷ್ಟು ಮಹತ್ವದ್ದೊ?. ನಡೆಯೋದು ಅಷ್ಟೇ ಮಹತ್ವದ್ದು. ನಡೆಯುವಾಗ ಉಂಟಾಗುವ ಸಂತೋಷ, ನಡೆದು ಮುಗಿದ ಮೇಲೆ ಆಗುವುದಿಲ್ಲ. ನಡೆಯುವಾಗಿನ ಸಂತೋಷವೇ ಬೇರೆ, ನಡೆದು ಮುಗಿದ ಮೇಲಿನ ಸಂತೋಷವೇ ಬೇರೆ.

ಸಾಧನೆಯಲ್ಲಿ ಸಾಧ್ಯ ಮರೆತರೆ ಸಾಧ್ಯ ತನ್ನಷ್ಟಕ್ಕೆ ದೊರಕುತ್ತದೆ. ಉದಾಹರಣೆಗೆ ನಾವು ನಿದ್ರೆ, ಸುಖ ಅನುಭವಿಸಬೇಕು. ಅಂದರೆ ಚೆನ್ನಾಗಿ ಗಾಢ ನಿದ್ರೆ, ಮಾಡಬೇಕು ಅಂತ ತಲೆಗೆ ಹಾಕಿಕೊಂಡು ಮಲಗಿದರೆ, ಆ ಮನುಷ್ಯನಿಗೆ ನಿದ್ರೆ ಬರುವುದಿಲ್ಲ. ಅದನ್ನೇ ಚಿಂತೆ ಮಾಡುತ್ತಾ ಇದ್ದರೆ ನಿದ್ರೆ ಬರೋ ದಿಕ್ಕೆ ಸಾಧ್ಯನೇ ಇಲ್ಲ. ನಿದ್ರೆ ಚೆನ್ನಾಗಿ ಬರಬೇಕಾದರೆ ನಿದ್ರೆಯನ್ನು ಮರೆಯ ಬೇಕು. ಹಾಡುವವನು ಹಾಡುತ್ತಾ ಇರುತ್ತಾ ನೆ. ಹಾಡಿನ ಆನಂದದ ಕಡೆ ಲಕ್ಷ್ಯ ಕೊಟ್ಟರೆ ಹಾಡು ಹೋಗುತ್ತದೆ. ಆ ಹಾಡಿನ ಆನಂದ ಅನುಭವಿಸ ಬೇಕಾದರೆ ಹಾಡಿ ನೊಳಗೆ, ಕೇಳುವುದರೊಳಗೆ, ಹಾಡೋ ದ್ರಾಗ ಮನುಷ್ಯ ಮರೆಯ ಬೇಕಾಗುತ್ತದೆ. ಹಾಗೆ ಸಾಧನೆ ಹಿಡಿದ ಬಳಿಕ ಸಾಧ್ಯ ಮರೆಯಬೇಕು. ಸರಿಯಾದ ಸಾಧನೆ ಅಂತ ಗೊತ್ತಾದ ಬಳಿಕ ಆಗ ಸಂತೋಷ ಇರುತ್ತದೆ.



ಮನುಷ್ಯ ಕೊನೆಗೆ ಏನಾಗುತ್ತಾನೆ ಅದು ಮಹತ್ವದ್ದಲ್ಲ. ಕೊನೆಯವರೆಗೆ ಹೇಗೆ ಬದುಕನ್ನು ಸಾಗಿಸುತ್ತಾನೆ ಅದು ಮಹತ್ವ. ಸಾಧನೆ ಜೀವನವನ್ನು ವ್ಯಾಪಿಸುತ್ತದೆ. ಸಾಧ್ಯ ಒಂದು ಕ್ಷಣದಲ್ಲಿ ಮುಕ್ತಾಯವಾಗುತ್ತದೆ. ವ್ಯಾಪಿಸುವುದು ಮಹತ್ವದ್ದು. ಜೀವನದ ತುಂಬಾ ಅನುಭವಿಸುವುದು ಮಹತ್ವದ್ದು. ಮಹರ್ಷಿ ರವೀಂದ್ರ ನಾಥ ಟ್ಯಾಗೋರ್ ಗೀತಾಂಜಲಿಯಲ್ಲಿ ಒಂದು ಸುಂದರ ಗೀತೆ ಬರೆದಿದ್ದಾರೆ ಭಗವಂತನೇ, ನನ್ನ ಚಿಕ್ಕ ಮನೆ. ಅದನ್ನೆಲ್ಲ ಸ್ವಚ್ಛ ಮಾಡಿದ್ದೇನೆ. ಕಿಟಕಿಬಾಗಿಲುಗಳನ್ನು ತೆರೆದಿದ್ದೇನೆ. ಒಂದು ಬೆಳಕು ಕೊಡುವ ದೀಪ ಹಚ್ಚಿದ್ದೇನೆ. ಎಣ್ಣೆ ಹಾಕಿ ದೀಪದ ರಕ್ಷಣೆ ಮಾಡುತ್ತಾ ಇದ್ದೇನೆ. ಒಳಗೆ ಧೂಪ ಹಾಕಿದ್ದೇನೆ. ಸುಗಂಧ ಮನೆಯೊಳಗೇ ತುಂಬಿದೆ. ಮನೆ ಸಿದ್ಧವಾಗಿದೆ. ಭಗವಂತನೇ ನಿನ್ನನ್ನು ಸ್ವಾಗತಿಸಲು ಈ ಮನೆ ಸಿದ್ಧವಾಗಿದೆ. ಒಳಗೆ ಹೊಲಸಿಲ್ಲ. ಕತ್ತಲೆ ಇಲ್ಲ ಬೆಳಕಿದೆ. ನಾನು ಮನೆಯಲ್ಲಿ ಕುಳಿತು ನಿನ್ನ ದಾರಿ ಕಾಯುತ್ತಾ ಇದ್ದೇನೆ. ನೀನು ಎಂದು ಬರುತ್ತೀಯ ಎನ್ನುವುದು ಮಹತ್ವದ್ದಲ್ಲ. ನೀನು ಬರುತ್ತಿ ಅನ್ನುವುದಷ್ಟೇ ಮಹತ್ವ ನನಗೆ. ನಿನಗಾಗಿ ದಾರಿ ಕಾಯುವಾಗ ಆಗುವ ಆನಂದ ಬಹುಶ ನಿನ್ನನ್ನು ಕಂಡಾಗ ಆಗಲಿಕಿಲ್ಲ. ಭಗವಂತನೇ. ಮನೆ ಸ್ವಚ್ಛ ಮಾಡುವಾಗ ಸುಗಂಧ ಇರಿಸುವಾಗ ಎಷ್ಟು ಆನಂದ ಆಗುತ್ತೆ ಗೊತ್ತಾ. ಭಗವಂತನೇ ಯಾಕೆಂದರೆ ನಾನು ಏನು ಮಾಡುತ್ತಾ ಇದ್ದೇನೆ?. ಅದು ನಿನಗಾಗಿ ಅನ್ನೋ ಸಂತೋಷ ತುಂಬಿದೆ. ತಯಾರಿಯಲ್ಲಿ ಸಂತೋಷಪಡುತ್ತಾ ಇದ್ದೇನೆ. ವರ್ಷದ ಪ್ರಾರಂಭದಲ್ಲಿ ನಾವು ಪುಸ್ತಕ ತೆಗೆಯುತ್ತಿದ್ದಂತೆ ಇದು ಯಾವಾಗ ಮುಗಿಯುತ್ತೆ ಅಂದರೆ ಸಂತೋಷವಿಲ್ಲ....! ಕಲಿಯುತ್ತಾ ಕಲಿಯುತ್ತಾ ಆನಂದ ಪಡಬೇಕು. ಕಲಿಯೋದು ವರ್ಷಪೂರ್ತಿ ಇರುತ್ತದೆ. ಹಾಗಾಗಿ ವರ್ಷ ಪೂರ್ತಿ ಸಂತೋಷಪಡಬಹುದು. ಫಲಿತಾಂಶದ ಆನಂದ ಕೇವಲ ಒಂದೆರಡು ದಿನ ಮಾತ್ರ. ಸಾಧನದಲ್ಲಿ ಆನಂದ ಇರುವಷ್ಟು ಸಾಧ್ಯದಲ್ಲಿ ಇಲ್ಲ. ಶಾಲಾ ವಾರ್ಷಿಕೋತ್ಸವ ಇನ್ನು ಒಂದೆರಡು ತಿಂಗಳು ಇರುವಾಗಲೇ ತಯಾರಿ ನಡೆದಿರುತ್ತದೆ. ವಾರ್ಷಿಕೋತ್ಸವ ಕೇವಲ ಐದಾರು ಗಂಟೆ ಕಾರ್ಯಕ್ರಮ. ಅದರಲ್ಲಿ ನಮ್ಮದು 10 ನಿಮಿಷದ ಕಾರ್ಯಕ್ರಮ. 10 ನಿಮಿಷ ಮುಗಿಯುತ್ತಿದ್ದಂತೆ ಸಂತೋಷ ಮುಗಿಯಿತು. ಆದರೆ ಎರಡು ತಿಂಗಳು ವಾರ್ಷಿಕೋತ್ಸವ ನೆನಿಸಿಕೊಂಡು ಮಾಡುವ ತಯಾರಿ ಪ್ರತಿ ಕ್ಷಣ ಸಂತೋಷ ಕೊಡುತ್ತದೆ. ಆ ಸಂತೋಷ ಎರಡು ತಿಂಗಳು ನಿರಂತರ ಇರುತ್ತದೆ. ನಾವು ಮಕ್ಕಳ ಫಲಿತಾಂಶ ನೋಡುವುದಲ್ಲ. ಸಾಧನೆಗೆ ಒತ್ತು ಕೊಡಬೇಕು. ಸಾಧನೆಯಾಗುತ್ತಿದ್ದರೆ ಆನಂದ ಪಡಬೇಕು. ಪ್ರತಿದಿನ ಕಲಿಕೆಯಲ್ಲಿ ಆನಂದ ಪಡಬೇಕು. ಸಾಧನೆ ಸರಿಯಾಗಿದ್ದರೆ ಫಲಿತಾಂಶ ಖಂಡಿತ ಉತ್ತಮವಾಗಿರುತ್ತದೆ. ಫಲಿತಾಂಶದ ಸಂತೋಷ ಒಂದೆರಡು ದಿನ. ಆದರೆ ಸಾಧನೆಯ ಸಂತೋಷ ವರ್ಷದ್ದು ಅಲ್ಲವೇ?

**- ಎಂ.ಪಿ. ಜ್ಞಾನೇಶ್,** ಮಂಗಳೂರು

# ಒಂದು ಗಾದೆಯ ಕುರಿತು

**ಒಂದು ಮರ ಬೆಳೆದು ಹೆಮ್ಮರವಾಗಲು ಸಮಯ ಬೇಕು. ಹಾಗೆಯೇ ನಮ್ಮ ಯಶಸ್ಸು ಕೂಡ ರಾತ್ರೋ ರಾತ್ರಿ ಸಿಗುವಂಥದ್ದಲ್ಲ. ಅದಕ್ಕೆ ತಾಳ್ಮೆ ಮತ್ತು ನಿರಂತರ ಪ್ರಯತ್ನದ ಅಗತ್ಯವಿದೆ. ಇಂದು ನೀವು ಹಾಕುವ ಒಂದು ಸಣ್ಣ ಹೆಜ್ಜೆ ಅಥವಾ ನೀವು ಬಿತ್ತುವ ಒಂದು ಬೀಜ, ಭವಿಷ್ಯದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ.**

ಸಂಪಾದಕರ ಸದ್ಯಶೋಧನೆ ಚೀನಾದಲ್ಲಿ ಒಂದು ಸುಪ್ರಸಿದ್ಧ ಗಾದೆಯಿದೆ. ಒಂದು ಮರವನ್ನು ನೆಡಲು ಅತ್ಯಂತ ಸೂಕ್ತವಾದ ಸಮಯ 20 ವರ್ಷಗಳ ಹಿಂದೆ ಆಗಿತ್ತು. ಎರಡನೇ ಅತ್ಯಂತ ಸೂಕ್ತ ಸಮಯ ಈಗ. ಈ ಸಾಲುಗಳು ಕೇವಲ ಗಿಡ-ಮರಗಳ ಬಗ್ಗೆ ಮಾತ್ರವಲ್ಲ, ನಮ್ಮ ಜೀವನದ ಪ್ರತಿಯೊಂದು ನಿರ್ಧಾರ ಮತ್ತು ಗುರಿಗಳ ಬಗ್ಗೆಯೂ ಬೆಳಕು ಚೆಲ್ಲುತ್ತವೆ.

ನಾವೆಲ್ಲರೂ ಆಗಾಗ ಅಯ್ಯೋ, ನಾನು ಈ ಕೆಲಸವನ್ನು ಮೊದಲೇ ಮಾಡಬೇಕಿತ್ತು ಎಂದು ಪಶ್ಚಾತ್ತಾಪ ಪಡುತ್ತೇವೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ಮರವನ್ನು ನೆಟ್ಟಿದ್ದರೆ, ಇಂದು ಅದು ನಮಗೆ ನೆರಳು, ತಂಪುಗಾಳಿ ಮತ್ತು ಹಣ್ಣುಗಳನ್ನು ನೀಡುತ್ತಿತ್ತು. ಹಾಗೆಯೇ, ಬಾಲ್ಯದಲ್ಲಿ ಒಂದು ಕಲೆಯನ್ನು ಕಲಿತಿದ್ದರೆ ಅಥವಾ ಯೌವನದಲ್ಲಿ ಒಂದು ಉಳಿತಾಯದ ಯೋಜನೆಯನ್ನು ಆರಂಭಿಸಿದ್ದರೆ, ಇಂದು ನಾವು ಅದರ ಫಲವನ್ನು ಉಣ್ಣಬಹುದಿತ್ತು. ಆದರೆ ಕಳೆದುಹೋದ ಕಾಲ ಮರಳಿ ಬಾರದು.

ಕಳೆದುಹೋದ ಸಮಯದ ಬಗ್ಗೆ ಚಿಂತಿಸುತ್ತಾ ಕುಳಿತುಕೊಳ್ಳುವುದು ವ್ಯರ್ಥ. ನಾವು ಇಪ್ಪತ್ತು ವರ್ಷಗಳ ಹಿಂದೆ ಆ ಕೆಲಸವನ್ನು ಮಾಡಲಿಲ್ಲ ಎಂಬ ಕಾರಣಕ್ಕೆ, ಇಂದೂ ಕೂಡ ಮಾಡದೇ ಬಿಟ್ಟರೆ, ಮುಂದಿನ ಇಪ್ಪತ್ತು ವರ್ಷಗಳ ನಂತರವೂ ನಾವು ಇದೇ ಪಶ್ಚಾತ್ತಾಪವನ್ನು ಪಡಬೇಕಾಗುತ್ತದೆ.

ಹೊಸದನ್ನು ಕಲಿಯಲು ಅಥವಾ ಒಳ್ಳೆಯದನ್ನು ಮಾಡಲು ಇಂದೇ ಮೊದಲ ದಿನ. ನಮ್ಮ ಕೈಯಲ್ಲಿರುವುದು ಇಂದಿನ ಈ ಕ್ಷಣ ಮಾತ್ರ. ನಾಳೆ ಎಂಬುದು ಅನಿಶ್ಚಿತ, ನಿನ್ನೆ ಎಂಬುದು ಇತಿಹಾಸ. ಈ ಗಾದೆಯಲ್ಲಿ ಮರವನ್ನು ಉದಾಹರಣೆಯಾಗಿ ನೀಡಿರುವುದು ಅರ್ಥಪೂರ್ಣವಾಗಿದೆ.

ಒಂದು ಮರ ಬೆಳೆದು ಹೆಮ್ಮರವಾಗಲು ಸಮಯ ಬೇಕು. ಹಾಗೆಯೇ ನಮ್ಮ ಯಶಸ್ಸು ಕೂಡ ರಾತ್ರೋರಾತ್ರಿ ಸಿಗುವಂಥದ್ದಲ್ಲ. ಅದಕ್ಕೆ ತಾಳ್ಮೆ ಮತ್ತು ನಿರಂತರ ಪ್ರಯತ್ನದ ಅಗತ್ಯವಿದೆ. ಇಂದು ನೀವು ಹಾಕುವ ಒಂದು ಸಣ್ಣ ಹೆಜ್ಜೆ ಅಥವಾ ನೀವು ಬಿತ್ತುವ ಒಂದು ಬೀಜ, ಭವಿಷ್ಯದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ.

ನಾಳೆ ಮಾಡೋಣ ಎನ್ನುವ ಮನೋಭಾವವೇ ಪ್ರಗತಿಗೆ ದೊಡ್ಡ ಶತ್ರು. ಹಿಂದೆ ಮಾಡದ ತಪ್ಪನ್ನು ಈಗ ತಿದ್ದಿಕೊಳ್ಳಲು ಅವಕಾಶವಿದೆ. ಇಂದು ಮಾಡುವ ಸಣ್ಣ ಹೂಡಿಕೆ ಅಥವಾ ಓದು ಭವಿಷ್ಯದ ಬದುಕನ್ನು ಹಸನುಗೊಳಿಸುತ್ತದೆ. ಹಳೆಯ ಕಾಲದ ಬಗ್ಗೆ ವ್ಯಥೆ ಪಡುವುದಕ್ಕಿಂತ, ಭವಿಷ್ಯದ ಇಪ್ಪತ್ತು ವರ್ಷಗಳ ನಂತರ ಅಂದು ನಾನು ಸರಿಯಾದ ನಿರ್ಧಾರ ತಳೆದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಇಂದು ಕೆಲಸ ಮಾಡುವುದು ಜಾಣತನ. ಸಮಯ ಯಾರೊಬ್ಬರಿಗೂ ಕಾಯುವುದಿಲ್ಲ.

ನದಿ ಹರಿದು ಹೋದಂತೆ ಕಾಲವೂ ಉರುಳುತ್ತದೆ. ಆದರೆ ಆ ಹರಿವಿನಲ್ಲಿ ನಾವು ಹೇಗೆ ಈಜುತ್ತೇವೆ ಎಂಬುದು ಮುಖ್ಯ. ಆದ್ದರಿಂದ, ನೀವು ಯಾವುದನ್ನಾದರೂ ಸಾಧಿಸಬೇಕು ಎಂದುಕೊಂಡಿದ್ದರೆ, ಅದು ಓದಿರಲಿ, ಬರವಣಿಗೆಯಿರಲಿ ಅಥವಾ ಪರಿಸರ ಸೇವೆಯಿರಲಿ... ಅದಕ್ಕೆ ಸಕಾಲ ಈಗ. ಇಂದೇ




ಮರ ನೆಡಿ, ಇಂದೇ ಕನಸಿನತ್ತ ಹೆಜ್ಜೆ ಹಾಕಿ. ನಾವು ಇಂದು ಯಾವುದನ್ನು ಈಗ ಎಂದು ಕರೆಯುತ್ತಿದ್ದೇವೆಯೋ, ಅದು ಇನ್ನು 20 ವರ್ಷಗಳ ನಂತರ ಹಿಂದಿನ ಕಾಲ ಎಂದೆನಿಸಿಕೊಳ್ಳುತ್ತದೆ.

ಇಂದು ನಾವು ಸೋಮಾರಿತನದಿಂದ ಕಾಲಹರಣ ಮಾಡಿದರೆ, 2046ರಲ್ಲಿ ಕುಳಿತು 2026ರಲ್ಲಿ ನಾನು ಆ ಕೆಲಸ ಮಾಡಬೇಕಿತ್ತು ಎಂದು ಮತ್ತೆ ಇದೇ ಗಾದೆಯನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಆ ಚಕ್ರವನ್ನು ಮುರಿಯಲು ಇಂದೇ ಶುಭ ಮುಹೂರ್ತ. ಯಾವುದೇ ಶುಭ ಕಾರ್ಯಕ್ಕೆ ಅಥವಾ ಪ್ರಗತಿಗೆ ಈ ಕ್ಷಣಕ್ಕಿಂತ ಉತ್ತಮವಾದ ಸಮಯ ಬೇರೊಂದಿಲ್ಲ.

ಇಂದಿನ ನಿರ್ಧಾರವೇ ನಾಳೆಯ ನೆರಳು ಎಂಬುದು ಬದುಕಿನ ಕರ್ಮ ಸಿದ್ಧಾಂತದ ಪ್ರತಿಫಲನ. ನಾವು ಇಂದು ತೆಗೆದುಕೊಳ್ಳುವ ಪ್ರತಿಯೊಂದು ಸಣ್ಣ ನಿರ್ಧಾರವೂ ನಮ್ಮ ಭವಿಷ್ಯದ ಆಕೃತಿಯನ್ನು ಕೆತ್ತುತ್ತದೆ. ನಾವು ಇಂದು ಯಾವ ಬೀಜ ಬಿತ್ತುತ್ತೇವೆಯೋ, ನಾಳೆ ಅದೇ ಮರವಾಗಿ ಬೆಳೆದು ನಮಗೆ ನೆರಳು ನೀಡುತ್ತದೆ.

ನೀವು ಬೇವಿನ ಬೀಜ ಬಿತ್ತಿ ಮಾವಿನ ಹಣ್ಣನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗೆಯೇ ಇಂದು ನೀವು ಕಷ್ಟಪಟ್ಟು ಓದುವ ನಿರ್ಧಾರ ಮಾಡಿದರೆ, ನಾಳೆ ನದ ನೆರಳು ಸಿಗುತ್ತದೆ. ಇಂದು ಸೋಮಾರಿತನ ಆರಿಸಿಕೊಂಡರೆ, ನಾಳೆ ಬಿಸಿಲಲ್ಲಿ (ಕಷ್ಟದಲ್ಲಿ) ನಿಲ್ಲಬೇಕಾಗುತ್ತದೆ. ನಮ್ಮ ಜೀವನ ನಾವು ಮಾಡುವ ಆಯ್ಕೆಗಳ ಮೊತ್ತ. ಬೆಳಗ್ಗೆ ಎದ್ದ ಕ್ಷಣದಿಂದ ರಾತ್ರಿ ಮಲಗುವವರೆಗೆ ನಾವು ತೆಗೆದುಕೊಳ್ಳುವ ಸಣ್ಣ ನಿರ್ಧಾರಗಳು (ಏನು ತಿನ್ನಬೇಕು, ಯಾರ ಜತೆ ಇರಬೇಕು, ಸಮಯವನ್ನು ಹೇಗೆ ಬಳಸಬೇಕು) ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ.

ಇಂದು ವ್ಯಾಯಾಮ ಮಾಡುವ ನಿರ್ಧಾರ, ವೃದ್ಧಾಪ್ಯದಲ್ಲಿ ಲವಲವಿಕೆಯ ಬದುಕನ್ನು ನೀಡುತ್ತದೆ. ಇಂದು ಅನಗತ್ಯ ಖರ್ಚು ಕಡಿಮೆ ಮಾಡುವ ನಿರ್ಧಾರ, ಭವಿಷ್ಯದ ಆರ್ಥಿಕ ಸಂಕಷ್ಟದ ಸಮಯದಲ್ಲಿ ಆಸರೆಯಾಗುತ್ತದೆ.

**- ವಿಶ್ವೇಶ್ವರ** ಭಟ್

## ರಾಜಘಟ್ಟದಲ್ಲೇ ಲಾರಿಗಳ ನಿಲುಗಡೆಗೆ ಲಾರಿ ಮಾಲೀಕರ ಆಗ್ರಹ

» ಮೊದಲನೇ ಪುಟದಿಂದ

ಜಾಗದಲ್ಲಿ ಬಾಡಿಗೆ ಅಥವಾ ಹಣ ವಸೂಲಿ ಮಾಡುತ್ತಿಲ್ಲ. ಜೊತೆಗೆ ಯಾವುದೇ ಶಾಶ್ವತ ಕಟ್ಟಡ ನಿರ್ಮಿಸದೇ, ಕೇವಲ ಲಾರಿ ನಿಲುಗಡೆಗೆ ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಈ ಮೂಲಕ ಸರ್ಕಾರಿ ನಿಯಮ ಉಲ್ಲಂಘಿಸದೇ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಹೇಳಿದರು.

ರೈಲ್ವೆ ಅಧಿಕಾರಿಗಳೂ ಇದಕ್ಕೆ ಸಹಕಾರ ನೀಡುತ್ತಿದ್ದು, ಯಾವುದೇ ಅಡಚಣೆ ಇಲ್ಲದೆ ಲಾರಿಗಳ ಸಂಚಾರ ಮತ್ತು ನಿಲುಗಡೆ ನಡೆಯುತ್ತಿದೆ. ಪಕ್ಕದಲ್ಲಿ 1 ಎಕರೆ 6 ಗುಂಟೆ ಸರ್ಕಾರದ ಜಾಗವಿದ್ದು, ಹಲವು ವರ್ಷಗಳಿಂದ ಖಾಲಿ ಇರುವುದರಿಂದ ಆ ಜಾಗವನ್ನೂ ಸಹ ಲಾರಿ ನಿಲುಗಡೆಗಾಗಿ ಬಳಸಿಕೊಳ್ಳಲಾಗುತ್ತಿದೆ. ಆದರೀಗ ಈ ಜಾಗ ನಮ್ಮದೆಂದು ಹೇಳಿ ಈ ಜಾಗದಿಂದ ಹೋಗುವಂತೆ ನಮ್ಮ ಮೇಲೆ ಒತ್ತಡ ಏರಲಾಗುತ್ತಿದೆ. ಇದನ್ನು ತಪ್ಪಿಸಬೇಕೆಂದು ಮನವಿ ಮಾಡಿದರು.

ಸಾರ್ವಜನಿಕ ಹಿತದೃಷ್ಟಿಯಿಂದ ಹಾಗು ಹಲವು ವರ್ಷಗಳಿಂದ ಬಳಕೆ ಮಾಡುತ್ತಿರುವುದರಿಂದ ಪ್ರಸ್ತುತ ಬಳಸುತ್ತಿರುವ ಗೂಡ್ಸ್ ಶೆಡ್ ಮತ್ತು ಪಕ್ಕದ ಸರ್ಕಾರಿ ಜಾಗದಲ್ಲಿಯೇ ಲಾರಿಗಳನ್ನು ನಿಲ್ಲಿಸಲು ಶಾಶ್ವತ ಅಥವಾ ತಾತ್ಕಾಲಿಕ ಅನುಮತಿ ನೀಡಬೇಕೆಂದು ಒತ್ತಾಯಿಸಿ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರಿಗೆ ಮನವಿ ಸಲ್ಲಿಸಿದರು.

ಹಾಸನ ಗೂಡ್ಸ್ ಲಾರಿ ಮಾಲೀಕರ ಸಂಘದ ಲೋಕೇಶ್, ಮಂಜುನಾಥ್, ಶೇಖರ್ ಕುಮಾರ್, ಸಂಜಯ್, ಬಲರಾಮ್, ಶಾರಕ್ ಕುಮಾರ್ ಇದ್ದರು.

# ಮತ್ತೆ ಭುಗಿಲೆದ್ದ ಸಂಘರ್ಷ: ಇರಾನ್ ಕ್ಷಿಪಣಿ ದಾಳಿ

## ಮೂವರು ಭಾರತೀಯರಿಗೆ ಗಾಯ: ಪ್ರಧಾನಿ ನರೇಂದ್ರ ಮೋದಿ ಖಂಡನೆ

• ಪ್ರಜೋದಯ ವರದಿ



**ನವದೆಹಲಿ:** ಇರಾನ್ ಮತ್ತು ಅಮೇರಿಕಾ ನಡುವೆ ಮತ್ತೆ ಸಂಘರ್ಷ ಮತ್ತೆ ಭುಗಿ ಲೆದ್ದಿದೆ. ಯುಎಇನ ಫ್ಯೂಜೈರಹ್ ಪೆಟ್ರೋಲಿಯಂ ಕೈಗಾರಿಕಾ ವಲಯದ ಮೇಲೆ ಇರಾನ್ ಕ್ಷಿಪಣಿ, ಡ್ರೋನ್ ದಾಳಿ ನಡೆಸಿದ್ದು, ಈ ವೇಳೆ ಮೂವರು ಭಾರತೀಯರು ಗಾಯಗೊಂಡಿದ್ದಾರೆ. ಕದನ ವಿರಾಮದ ನಂತರ ಇರಾನ್‌ನಿಂದ ಗಲ್ಫ್ ದೇಶಗಳಲ್ಲಿ ನಡೆದ ಮೊದಲ ದಾಳಿ ಇದಾಗಿದೆ. ಈ ದಾಳಿಯಲ್ಲಿ ಭಾರತೀ ಯರಿಗೆ ಗಾಯವಾದ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಖಂಡನೆ ವ್ಯಕ್ತ ಪಡಿಸಿದೆ. ಪಶ್ಚಿಮ ಏಷ್ಯಾದಾದ್ಯಂತ ಶಾಂತಿ ಮತ್ತು ಸ್ಥಿರತೆಯನ್ನು ಪುನಃಸ್ಥಾಪಿಸುವ ನಿಟ್ಟಿನಲ್ಲಿ ಮಾತುಕತೆ ಮತ್ತು ರಾಜತಾಂತ್ರಿ ಕತೆಗೆ ಭಾರತ ಬೆಂಬಲ ನೀಡುತ್ತಿದೆ ಎಂದು ಸಚಿವಾಲಯ ಹೇಳಿದೆ.

ಫ್ಯೂಜೈರಹ್ ಪೆಟ್ರೋಲಿಯಂ ಕೈಗಾರಿಕಾ ವಲಯದ ಮೇಲೆ ನಡೆದ ದಾಳಿಯಲ್ಲಿ ಮೂವರು ಭಾರತೀಯರು ಗಾಯ ಗೊಂಡಿರುವುದು ಸ್ವೀಕಾರಾರ್ಹವಲ್ಲ. ನಾಗರಿಕ ಮೂಲಸೌಕರ್ಯ ಮತ್ತು ಮುಗ್ಧ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ದಾಳಿಯನ್ನು ಕೂಡಲೇ ನಿಲ್ಲಿಸಬೇಕೆಂದು ಕರೆ ನೀಡುತ್ತೇವೆ ಎಂದು ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**ಪ್ರಧಾನಿ ಮೋದಿ ಖಂಡನೆ**

ಯುನೈಟೆಡ್ ಅರಬ್ ಎಮಿರೇಟ್ಸ್ ಮೇಲೆ ನಡೆದ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಕೂಡ ತೀವ್ರವಾಗಿ ಖಂಡಿಸಿದ್ದಾರೆ. ಈ ದಾಳಿಯಲ್ಲಿ ಮೂವರು ಭಾರತೀಯರು ಗಾಯ ಗೊಂಡಿರುವುದು ದುಃಖಕರ. ಪೌರರು ಮತ್ತು ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದು ಅಸ್ವೀಕಾರಾರ್ಹ ಎಂದು ಅವರು 'ಎಕ್ಸ್'ನಲ್ಲಿ ಪ್ರಕಟಿಸಿದ ಸಂದೇಶದಲ್ಲಿ ಹೇಳಿದ್ದಾರೆ.

ಭಾರತವು ಯುಎಇಗೆ ದೃಢ ಬೆಂಬಲ ವ್ಯಕ್ತಪಡಿಸಿದ್ದು, ಎಲ್ಲಾ ಸಮಸ್ಯೆಗಳನ್ನು ಸಂವಾದ ಮತ್ತು ರಾಜತಾಂತ್ರಿಕ ಮಾರ್ಗ ಗಳ ಮೂಲಕ ಶಾಂತಿಯುತವಾಗಿ ಪರಿಹರಿಸಬೇಕೆಂದು ಪುನರು ಚ್ಚರಿಸಿದೆ. r rm m ಮೂಲಕ ಸುರಕ್ಷಿತ ಮತ್ತು ಅಡ್ಡಿಯಿಲ್ಲದ ಸಾಗಾಟವು ಪ್ರಾದೇಶಿಕ ಶಾಂತಿ, ಸ್ಥಿರತೆ ಹಾಗೂ ಜಾಗತಿಕ ಇಂಧನ ಭದ್ರತೆಗೆ ಅತ್ಯಂತ ಮುಖ್ಯವೆಂದು ಹೇಳಿದ್ದಾರೆ.

**ದಕ್ಷಿಣ ಕೊರಿಯಾದ ಹಡಗು ಸ್ಫೋಟ**

ಅಮೇರಿಕಾ ಮತ್ತು ಇರಾನ್ ನಡುವಿನ ತಿಕ್ಕಾಟದ ಕೇಂದ್ರ ಬಿಂದುವಾಗಿರುವ ಹೊರ್ಮುಜ್ ಜಲಸಂಧಿಯಲ್ಲಿ ಇದೇ ಮೊದಲ ಬಾರಿಗೆ ದಕ್ಷಿಣ ಕೊರಿಯಾದ ಹಡಗು ಸ್ಫೋಟಗೊಂಡಿದೆ.

ಮಂಗಳವಾರ ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವಾಲಯವು ಹೆಚ್‌ಎಂಎಂ ನಾಮು ಎಂಬ ಸರಕು ಸಾಗಣೆ ಹಡಗು ಹೊರ್ಮುಜ್ ಜಲಸಂಧಿಯಲ್ಲಿ ಸ್ಫೋಟ ಮತ್ತು ಬೆಂಕಿಗೆ ಆಹುತಿಯಾಗಿದೆ ಎಂದು ದೃಢಪಡಿಸಿದೆ. ಮಧ್ಯಪ್ರಾಚ್ಯದಲ್ಲಿ ಸಂಘರ್ಷ ತೀವ್ರಗೊಂಡ ನಂತರ, ಈ ಆಯಕಟ್ಟಿನ ಜಲಮಾರ್ಗದಲ್ಲಿ ದಕ್ಷಿಣ ಕೊರಿಯಾದ ವಾಣಿಜ್ಯ ಹಡಗಿಗೆ ಹಾನಿಯಾ ಗುತ್ತಿರುವುದು ಇದೇ ಮೊದಲು ಎನ್ನಲಾಗಿದೆ.

### ಸಮುದ್ರ ಸಂಚಾರದಲ್ಲಿ ಬಿಗಿ ಭದ್ರತೆ

**ಭಾರತದ ಇಂಧನ ಆಮದಿಗೆ ಅತ್ಯಂತ ನಿರ್ಣಾಯಕವಾಗಿರುವ ಹೊರ್ಮುಜ್ ಜಲ ಸಂಧಿಯಲ್ಲಿ ಅಡೆತಡೆಯಿಲ್ಲದ ಹಡಗು ಸಂಚಾರದ ಪ್ರಾಮುಖ್ಯತೆಯನ್ನು ನವದೆಹಲಿ ಒತ್ತಿ ಹೇಳಿದೆ. ಗಾಯ ಗೊಂಡಿರುವ ಮೂವರು ಭಾರತೀಯರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು ನೀಡಲು ಯುಎಇಯಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಅಲ್ಲಿನ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ.**

**ಈ ಘಟನೆಯು ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿದ್ದು, ಅಮೇರಿಕಾ ಮತ್ತು ಬ್ರಿಟನ್ ಸೇರಿ ಹಲವು ದೇಶಗಳು ಭಾರತ ಮತ್ತು ಯುಎಇಗೆ ಬೆಂಬಲ ಸೂಚಿಸಿವೆ.**

ಮೂಲಗಳ ಪ್ರಕಾರ ದಾಳಿಗೊಳಗಾದ ಹಡಗು 35,000 ಟನ್ ತೂಕದಾಗಿದ್ದು, ದಾಳಿ ವೇಳೆ ಹಡಗಿನಲ್ಲಿದ್ದ ಎಲ್ಲಾ 24 ಸಿಬ್ಬಂದಿಗಳು (6 ದಕ್ಷಿಣ ಕೊರಿಯಾದವರು ಮತ್ತು 18 ವಿದೇಶಿ ಪ್ರಜೆಗಳು) ಸುರಕ್ಷಿತವಾ ಗಿದ್ದು, ಯಾರಿಗೂ ಗಾಯಗಳಾಗಿಲ್ಲ.

## ಮಂಗಳವಾರದ ಕಾಫಿ ಧಾರಣೆ: 50 ಕೆ.ಜಿ.ಗೆ

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ಹಾದಿ ಕಾಫಿ | 23,500 | 13,100 | 18,100 | 9,400 |
| ವೆಸ್ಟರ್ನ್ ಕಾಫಿ | 23,600 | 13,100 | 18,600 | 9,500 |
| ಗ್ರೈನ್‌ಕಾಫಿ ಸಕಲೇಶಪುರ | 23,250 | 12,200 | 18,200 | 9,050 |
| ಲಿಖಿತ್‌ಕಾಫಿ ಸಕಲೇಶಪುರ | 23,100 | 12,500 | 18,100 | 9,100 |
| ಗೀತಾ ಕಾಫಿ ಸಕಲೇಶಪುರ | 23,300 | 12,650 | 18,000 | 9,150 |
| ಬಾಳ್ಳುಪೇಟೆ | 23,400 | 12,500 | 18,300 | 9,000 |
| ಸಾರಾಗೋಲ್ಡ್ ಚಿಕ್ಕಮಗಳೂರು | 23,150 | 12,100 | 18,000 | 9,100 |
| ಸತ್ಯಕಾಫಿ ಚಿಕ್ಕಮಗಳೂರು | 23,150 | 12,690 | 18,100 | 9,100 |

## ಉಚಿತ ಹೊಲಿಗೆ ಯಂತ್ರ ವಿತರಣೆ

• ಪ್ರಜೋದಯ ವರದಿ



**ಅರಕಲಗೂಡು:** ಮಹಿಳಾ ಸಬಲೀ ಕರಣಕ್ಕಾಗಿ ಸರ್ಕಾರ ಹಲವು ಯೋಜ ನೆಗಳನ್ನು ರೂಪಿಸಿದೆ. ಸೌಲಭ್ಯಗಳ ಉಪಯೋಗಪಡೆದು ಮಹಿಳೆಯರು ಆರ್ಥಿಕವಾಗಿ ಸಬಲರಾಗ ಬೇಕೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಇಲ್ಲಿನ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2024-25ನೇ ಸಾಲಿನ ಫಲಾನುಭವಿಗಳಿಗೆ ಉಚಿತ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿ, ಮನೆ ಯಲ್ಲಿರುವ ಹೆಣ್ಣುಮಕ್ಕಳು ಆರ್ಥಿಕ ವಾಗಿ ಸ್ವಾವಲಂಬಿಯಾಗಲು ಹೊಲಿಗೆ ಯಂತ್ರಗಳನ್ನು ನೀಡಲಾಗುತ್ತಿದೆ. 17 ಜನ ಫಲಾನುಭವಿಗಳಿಗೆ ವಿತರಣೆ ಮಾಡಲಾಗುತ್ತಿದ್ದು ಅದರ ಸದು ಪಯೋಗ ಪಡೆಯುವಂತೆ ತಿಳಿಸಿ ದರು. ನಿಗಮದ ಜಿಲ್ಲಾ ವ್ಯವಸ್ಥಾಪಕ ಟಿ.ರಾಕೇಶ್, ಸಹಾಯಕ ಅಭಿವೃದ್ಧಿ ಅಧಿಕಾರಿ ಆರ್. ಪುಣ್ಯವತಿ ಉಪಸ್ಥಿತರಿದ್ದರು.

## ಪಶ್ಚಿಮ ಬಂಗಾಳ ಗೆಲುವು: ಬಿಜೆಪಿ ಸಂಭ್ರಮಾಚರಣೆ



• ಪ್ರಜೋದಯ ವರದಿ

**ಹಾಸನ:** ಪಂಚ ರಾಜ್ಯ ಚುನಾ ವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಸ್ಪಷ್ಟ ಬಹುಮತ, ತಮಿಳುನಾಡು ಹಾಗು ಕೇರಳದಲ್ಲಿ ಖಾತೆ ತೆರೆದ ಹಿನ್ನಲೆಯಲ್ಲಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಸಂಭ್ರಮಾಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಅವರು ಮಾತನಾಡಿ, ಪಂಚ ರಾಜ್ಯ ಚುನಾವಣೆ ಯಲ್ಲಿ ಬಿಜೆಪಿ ಉತ್ತಮ ಸಾಧನೆ ಮಾಡಿದೆ. ದೇಶಾದ್ಯಂತ ಮೋದಿ ಯುಗಾರಂಭ ವಾಗಿದೆ. ಟಿಎಂಸಿ ಪಕ್ಷದ ಮಮತಾ ಬ್ಯಾನರ್ಜಿ ಆಡಳಿತಾವಧಿಯಲ್ಲಿ ಪಶ್ಚಿಮ ಬಂಗಾಳ ಗೂಂಡಾ ರಾಜ್ಯ ವಾಗಿತ್ತು. ಅಲ್ಲಿನ ಜನರು ದುರಾಡಳಿ ತಕ್ಕೆ ತುತ್ತಾಗಿ ಹೈರಾಣಾಗಿದ್ದರು. ನೆಮ್ಮದಿ ಹಾಗು ಬದಲಾವಣೆ ಬಯಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿ ದ್ದಾರೆ. ಈ ಗೆಲುವು ಪಶ್ಚಿಮ ಬಂಗಾ ಳದ ಜನರಿಗೆ ಸಮರ್ಪಣೆ ಎಂದರು.

ಸತ್ಯಮೇವ ಜಯತೇ ಎಂಬುದು ಶೃಂಗೇರಿಯ ಚುನಾವಣೆ ಮರು ಮತ ಎಣಿಕೆಯಲ್ಲಿ ಸಾಬೀತಾಗಿದೆ. ಕಾಂಗ್ರೆಸ್ ತನ್ನೆಲ್ಲ ತಂತ್ರ ಉಪ ಯೋಗಿಸಿ ಜೀವರಾಜ್ ಅವರಿಗೆ ಅನ್ಯಾಯ ಮಾಡಲಾಗಿತ್ತು. ನ್ಯಾಯಾಲಯದಲ್ಲಿ ಅವರಿಗೆ ನ್ಯಾಯ ಸಿಕ್ಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಯೋಗೀಶ್ ಮಂಜಣ್ಣ, ಮಹಿಳಾ ಮೋರ್ಚಾಧ್ಯಕ್ಷೆ ನೇತ್ರಾವತಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ನಂಬಿಹಳ್ಳಿ, ವಕ್ತಾರ ಆರ್.ಮೋಹನ್, ಬಿ. ವೇದಾವತಿ, ಯುವ ಮೋರ್ಚಾ ಅಧ್ಯಕ್ಷ ಅಮಿತ್ ಇತರರಿದ್ದರು.

## ಚಿಕಿತ್ಸೆ ನೆಪದಲ್ಲಿ ಆಸ್ಪತ್ರೆಗಳಿಂದ ಸುಲಿಗೆ: ಕಡಿವಾಣಕ್ಕೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಸರ್ಕಾರಿ ಹಾಗು ಖಾಸಗಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆ ನೀಡುವ ನೆಪದಲ್ಲಿ ದೊಡ್ಡ ಮಾಫಿಯಾ ನಡೆಯುತ್ತಿದ್ದು, ಕಡಿವಾಣ ಹಾಕಬೇಕೆಂದು ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಧರ್ಮಾನಾಯಕ್ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಜಿಲ್ಲೆಯ ಹಲವಾರು ಸರ್ಕಾರಿ ಆಸ್ಪತ್ರೆಗಳಲ್ಲಿ ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ. ಕರ್ತವ್ಯ ವೇಳೆಯಲ್ಲಿ ಮುಖ್ಯ ವೈದ್ಯಾ ಧಿಕಾರಿಗಳು ಲಭ್ಯವಿಲ್ಲದಿರುವುದು, ರೋಗಿಗಳಿಗೆ ಆಸ್ಪತ್ರೆಯಲ್ಲೇ ದೊರೆ ಯುವ ಔಷಧಿಗಳನ್ನು ಹೊರ ಗಿನಿಂದ ತರಲು ಸೂಚಿಸುವುದು ಸಾಮಾನ್ಯವಾ ಗಿದೆ. ಅದರಿಂದ ಬಡ ಹಾಗು ಮಧ್ಯಮ ವರ್ಗದ ಜನರು ತೊಂದರೆ ಅನುಭವಿ ಸುತ್ತಿದ್ದಾರೆಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಅನಾವಶ್ಯಕ ಎಕ್ಸ್-ರೇ ಹಾಗು ಸ್ಕ್ಯಾನಿಂಗ್ ಪರೀಕ್ಷೆ ಗಳ ಮೂಲಕ ಹೆಚ್ಚಿನ ಹಣ ವಸೂಲಿ ಮಾಡಲಾಗುತ್ತಿದೆ. ಸರ್ಕಾರಿ ವೈದ್ಯರೇ ಹಣದಾಸೆಗೆ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡುತ್ತಾರೆ. ಆರೋಗ್ಯ ವಿಷಯವಾದ್ದರಿಂದ ಜನರು ಸಹ ಸಾಲ ಸೋಲ ಮಾಡಿ ಆಸ್ಪತ್ರೆಗೆ ದಾಖಲಿಸಬೇಕಾಗುತ್ತದೆ. ಸಾರ್ವಜನಿ ಕರ ಅಸಹಾಯಕತೆಯನ್ನು ಅನೇಕ ವೈದ್ಯರು ದುರುಪಯೋಗ ಪಡಿಸಿ ಕೊಳ್ಳುತ್ತಿದ್ದಾರೆ. ಚಿಕಿತ್ಸೆ ಬಳಿಕ ಹೆಚ್ಚಿನ ಬಿಲ್ ವಿಚಾರ ದಲ್ಲಿ ಆಸ್ಪತ್ರೆ ಹಾಗು ರೋಗಿಗಳ ಕುಟುಂಬಸ್ಥರ ನಡುವೆ ಜಗಳ ಸಾಮಾನ್ಯವಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಖಾಸಗಿ ಆಸ್ಪತ್ರೆಗಳ ಅವ್ಯವಹಾರಗಳ ಮೇಲೆ ನಿರಂತರ ನಿಗಾ ವಹಿಸಬೇಕು. ಎಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚದ ವಿವರಗಳನ್ನು ಕಡ್ಡಾಯವಾಗಿ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಬೇಕು. ರೋಗಿ ಗಳಿಗೆ ಸರಿಯಾದ ಚಿಕಿತ್ಸೆ ನೀಡದ ವೈದ್ಯರು ಮತ್ತು ಸಿಬ್ಬಂದಿ ವಿರುದ್ಧ ದೂರು ಬಂದರೆ ತಕ್ಷಣ ಕ್ರಮ ಕೈಗೊಳ್ಳ ಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ಪಾಲನೆ ಕಡ್ಡಾಯ ಗೊಳಿಸಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಅನಾವಶ್ಯಕಪರೀಕ್ಷೆಗಳನ್ನು ನಿಯಂತ್ರಿಸಿ, ಬಿಲ್ ನೀಡುವಾಗ ಜಿಎಸ್‌ಟಿ ಪಾವತಿ ರಸೀದಿ ನೀಡಬೇಕು. ಸರ್ಕಾರದ ವಿಮಾ ಯೋಜನೆಗಳ ದುರು ಪಯೋಗವನ್ನು ತಡೆಗಟ್ಟಬೇಕೆಂದು ಒತ್ತಾಯಿಸಿದರು.

ಶ್ರೀರಾಮಸೇನೆ ತಾಲ್ಲೂಕು ಅಧ್ಯಕ್ಷ ಜಗದೀಶ್, ಪ್ರತಿಮಾ, ಮಹೇಶ್, ಸುರೇಶ್‌ಗೌಡ ಇತರರಿದ್ದರು.

## ಭೂಸ್ವಾಧೀನ ವಿಳಂಬವಾಗಿಲ್ಲ: ಶಾಸಕರಿಂದ ತಪ್ಪು ಮಾಹಿತಿ

» ಮೊದಲನೇ ಪುಟದಿಂದ

ಕೊರತೆಯಾಗಿದೆ. ಬೇಸಿಗೆ ಹಿನ್ನಲೆ ಕುಡಿಯುವ ನೀರಿಗೆ ಸಮಸ್ಯೆಯಾಗ ದಂತೆ ಜಿಲ್ಲಾಡಳಿತ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಒಟ್ಟು 39 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗಿದ್ದು, ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಮಹಾನಗರ ಪಾಲಿಕೆಯ 23 ವಾರ್ಡ್ ಗಳಲ್ಲಿ ಸಮಸ್ಯೆ ಇರುವುದಾಗಿ ಗುರುತಿ ಸಲಾಗಿದೆ. ಜೊತೆಗೆ ಯಾವುದೇ ಪ್ರದೇಶದಲ್ಲಿ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ 6,56,156 ದೊಡ್ಡ ಜಾನುವಾರುಗಳು ಹಾಗು 3,28,445 ಸಣ್ಣ ಜಾನುವಾರುಗಳಿದ್ದು, ಮೇವಿಗೆ ಯಾವುದೇ ಸಮಸ್ಯೆ ಇಲ್ಲ. ಪ್ರಸ್ತುತ 8,81,378 ಮೆಟ್ರಿಕ್ ಟನ್ ಮೇವು ಲಭ್ಯವಿದ್ದು, 30 ವಾರಗಳ ಅವಧಿಗೆ ಸಾಕಾಗುವಷ್ಟು ಸಂಗ್ರಹಿಸಲಾಗಿದೆ.

ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮನೆಗಣತಿ ಕಾರ್ಯ ಶೇ.100ರಷ್ಟು ಪೂರ್ಣಗೊಂಡಿದ್ದು, ಶಿಕ್ಷಕರು ಮತ್ತು ಅಧಿಕಾರಿಗಳ ಶ್ರಮಕ್ಕೆ ಜಿಲ್ಲಾಧಿಕಾರಿ ಅಭಿನಂದನೆ ಸಲ್ಲಿಸಿದರು. ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ಗೀತಾ, ಡಿಡಿಪಿಐ ಬಲರಾಮ್ ಇದ್ದರು.

## ಎಎಪಿ ನಾಯಕರ ಪರ ವಕೀಲರ ನೇಮಕ: ಕೋರ್ಟ್

• ಪ್ರಜೋದಯ ವರದಿ

**ನವದೆಹಲಿ:** ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಗೆ ಹಾಜರಾಗದ ಎಎಪಿ ನಾಯಕರಾದ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ದುರ್ಗೇಶ್ ಪಾಠಕ್ ಅವರ ಪರವಾಗಿ ವಾದ ಮಂಡಿಸಲು ಹಿರಿಯ ವಕೀಲರನ್ನು ಅಮಿಕಸ್ ಕ್ಯೂರಿಗಳನ್ನಾಗಿ ನೇಮಿಸುವುದಾಗಿ ದೆಹಲಿ ಹೈಕೋರ್ಟ್ ಮಂಗಳವಾರ ತಿಳಿಸಿದೆ.

ಹಿತಾಸಕ್ತಿ ಸಂಘರ್ಷ ಮತ್ತು ಪಕ್ಷಪಾತ ಆತಂಕದ ಕಾರಣ ಮುಂದಿಟ್ಟು ಪ್ರಕರಣದ ವಿಚಾರಣೆ ನಡೆಸುತ್ತಿರುವ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರ ಮುಂದೆ ವಿಚಾರಣೆಗೆ ಹಾಜರಾಗಲು ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ದುರ್ಗೇಶ್ ಪಾಠಕ್ ನಿರಾಕರಿಸಿದ್ದಾರೆ. ಈ ಕಾರಣದಿಂದ ಪ್ರತಿವಾದಿಗಳ ಪರ ವಾದಿಸಲು ತಾನೇ ವಕೀಲರನ್ನು ನೇಮಿಸುವುದಾಗಿ ನ್ಯಾಯಾಲಯ ತಿಳಿಸಿದೆ.

## ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ: ಮಮತಾ ಹಠ

» ಮೊದಲನೇ ಪುಟದಿಂದ

ಬಗ್ಗೆಯೂ ಚರ್ಚೆ ನಡೆದಿದೆ. ಮುಖ್ಯ ಮಂತ್ರಿ ವಿಧಾನಸಭೆಯಲ್ಲಿ ಬಹುಮತ ಹೊಂದಿರಲೇಬೇಕು. ಒಂದು ವೇಳೆ ಬಹುಮತ ಕಳೆದು ಕೊಂಡರೆ, ಸಂಪ್ರ ದಾಯದಂತೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಚುನಾ ವಣಾ ಅಕ್ರಮದ ಆರೋಪಗಳು ಸಾಂವಿಧಾನಿಕ ನಿಯಮ ಗಳನ್ನು ಮುರಿಯಲು ಸಾಧ್ಯವಿಲ್ಲ. ಭಾರತೀಯ ಚುನಾವಣಾ ಆಯೋಗವು ಚುನಾವಣೆಗಳನ್ನು ನಡೆಸುತ್ತದೆ. ಆದರೆ ಬಹುಮತವು ಅಧಿಕಾರವನ್ನು ನಿರ್ಧರಿ ಸುತ್ತದೆ. ರಾಜೀನಾಮೆ ನೀಡಲು ನಿರಾಕ ರಿಸಿದ ಸಂದರ್ಭದಲ್ಲಿ ರಾಜ್ಯಪಾಲರು ಮಧ್ಯಪ್ರವೇಶಿಸಬಹುದಾಗಿದೆ. ಆರ್ಟಿಕಲ್ 164ರ ಅಡಿಯಲ್ಲಿ, ಬಹು ಮತ ಕಳೆದುಕೊಂಡರೆ ಮುಖ್ಯ ಮಂತ್ರಿ ಯನ್ನು ವಜಾಗೊಳಿಸಬಹುದಾಗಿದೆ.

294 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಲು 148 ಬಹುಮತದ ಅವಶ್ಯಕತೆ ಇದೆ. ಈ ಪೈಕಿ 204 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

### ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅಭಿಮತ

# ಕಸಾಪ ಸಂಸ್ಥಾಪಕರ ಸ್ಮರಣೆ ನಮ್ಮ ಕರ್ತವ್ಯ

• ಪ್ರಜೋದಯ ವರದಿ




**ಹಾಸನ:** ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗು ಅಂದಿನ ದಿವಾನರಾದ ಸರ್.ಎಂ. ವಿಶ್ವೇಶ್ವರಯ್ಯ ಅವರ ಸಹಕಾರ ಅತ್ಯಂತ ಮಹತ್ವದ್ದಾಗಿತ್ತು. ಇಂತಹ ಮಹನೀ ಯರನ್ನು ಸ್ಮರಿಸುವುದು ನಮ್ಮ ಕರ್ತವ್ಯ ವೆಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಹೇಳಿದರು.

ನಗರದ ಸ್ಕೌಟ್ ಆ್ಯಂಡ್ ಗೈಡ್ಸ್ ಭವನದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ವತಿಯಿಂದ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚ ರಣೆ ಹಾಗು ಬಸವ ಜಯಂತಿ ಕಾರ್ಯ ಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 1915ರ ಮೇ 5 ರಂದು ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಅಂದಿನಿಂದ ಇಂದಿನವರೆಗೂ ಸಾಹಿತ್ಯ, ನಾಡು-ನುಡಿ, ಸಂಸ್ಕೃತಿ ಹಾಗು ಭಾಷಾ ಅಭಿವೃದ್ಧಿಯಲ್ಲಿ ಅಪಾರ ಸೇವೆ ಸಲ್ಲಿಸಿದೆ. ಪರಿಷತ್ತಿನ ಮೊದಲ ಅಧ್ಯಕ್ಷರಾಗಿ ಹೆಚ್.ಬಿ. ನಂಜುಂಡಯ್ಯ ಆಯ್ಕೆಯಾಗಿದ್ದರೂ, ಅದರ ಸ್ಥಾಪನೆಗೆ ನಾಲ್ವಡಿ ಅವರ ಕೊಡುಗೆ ಅಪಾರ ಎಂದು ಹೇಳಿದರು.

ಎಲ್ಲಾ ಭಾಷೆಗಳಿಗಿಂತ ಕನ್ನಡ ಭಾಷೆ ಅತ್ಯಂತ ಶ್ರೀಮಂತವಾಗಿದ್ದು, ಎಂಟು ಜ್ಞಾನಪೀಠ ಪುರಸ್ಕಾರಗಳನ್ನು ಪಡೆದಿರುವ ಏಕೈಕ ಭಾಷೆ ಎಂಬ ಹೆಗ್ಗಳಿಕೆಗೆ ಪಾತ್ರ ವಾಗಿದೆ. ಅನೇಕ ಮಹಾನ್ ಚೇತನರ ಕೊಡುಗೆಯಿಂದ ಕನ್ನಡ ಸಾಹಿತ್ಯ ಪರಿಷತ್ ಇಂದು ಹೆಮ್ಮರವಾಗಿ ಬೆಳೆದಿದೆ. ಇದೇ ವೇಳೆ ಬಸವ ಜಯಂತಿಯ ಮಹತ್ವವನ್ನು ಉಲ್ಲೇಖಿಸಿದ ಅವರು, ಬಸವಣ್ಣನವರ ತತ್ವ- ಆದರ್ಶಗಳು ಜಾತಿ, ಮತ, ಪಂಥ ಗಳನ್ನು ಮೀರಿ ಮಾನವೀಯ ಮೌಲ್ಯ ಗಳನ್ನು ಪ್ರತಿಪಾದಿ ಸುತ್ತವೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದರು.

ಶಿಕ್ಷಕ ಸೋಮಶೇಖರ್ ಅವರು ಮಾತ ನಾಡಿ, 12ನೇ ಶತಮಾನದಲ್ಲಿ ಬಸವಣ್ಣ ನವರು ವಚನಗಳ ಮೂಲಕ ಸಮಾಜವನ್ನು ಒಗ್ಗೂಡಿಸಿದ ಮಹಾನ್ ವ್ಯಕ್ತಿ. ಅವರ ತತ್ವಗಳು ಜಗತ್ತಿನಲ್ಲಿ ಅಪರೂಪವಾಗಿದ್ದು, ಧರ್ಮ ಸ್ಥಾಪನೆಗೆ ವಚನಗಳನ್ನು ಮಾಧ್ಯ ಮವನ್ನಾಗಿ ಬಳಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ವಚನಕಾರರ ಸಾಹಿತ್ಯ ಇಂದಿನ ಸಮಾಜಕ್ಕೂ ಮಾರ್ಗದರ್ಶಕವಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಇಂತಹ ಕಾರ್ಯಕ್ರಮಗಳು ಯುವಪೀಳಿಗೆಗೆ ಪರಿಷತ್ತಿನ ಮಹತ್ವ ಹಾಗೂ ಶರಣರ ತತ್ವಗಳನ್ನು ಪರಿಚಯಿ ಸುತ್ತವೆಂದು ಅಭಿಪ್ರಾಯಪಟ್ಟರು.

ಸ್ಕೌಟ್ ಆ್ಯಂಡ್ ಗೈಡ್ಸ್ ಆಯುಕ್ತರಾದ ವೀರಭದ್ರಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಸವಣ್ಣ ನವರು ಜಾತಿ-ಮತ ಭೇದಗಳನ್ನು ದೂರ ಮಾಡಿ ಸಮಾಜವನ್ನು ಒಗ್ಗೂಡಿಸಿದ ಮಹಾನ್ ವ್ಯಕ್ತಿ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅವರ ಆದರ್ಶಗಳು ಹೆಚ್ಚು ಪ್ರಸ್ತುತವಾಗಿವೆ ಎಂದು ಹೇಳಿದರು.

ಕೇಂದ್ರ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಉಪ್ಪಾರ್ ಮಾತನಾ ಡಿದರು. ಬಸವ ಕೇಂದ್ರದ ಬಸವರಾಜ್, ಗಿರಿಜಾಂಬಿಕ, ಗೀತಾ, ಮಾಜಿ ಅಧ್ಯಕ್ಷ ಉದಯ್ ರವಿ, ಸಾಹಿತಿ ಚಲಂ ಹಾಡ್ಲ ಹಳ್ಳಿ, ಸೋಮಶೇಖರ್, ರೇಖಾ ಪ್ರಸಾದ್, ಮಮತಾ ಪಾಟೀಲ್, ಚೂಡಾಮಣಿ, ಪದ್ಮಾವತಿ, ಬಿ.ಎಸ್.ದೇಸಾಯಿ, ಅನಂತ ರಾಜು, ಗಣೇಶ್ ಅಂಕಪುರ, ಬಿ.ಎಂ. ರಾಜಶೇಖರ್, ಶಾಂತ ಅತ್ನಿ, ಚನ್ನಂಗಿಹಳ್ಳಿ ಶ್ರೀಕಾಂತ್ ಉಪಸ್ಥಿತರಿದ್ದರು.

## ಕಾರು ಅಪಘಾತ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಚಾಲಕನ ನಿರ್ಲಕ್ಷ್ಯದಿಂದ ಕಾರು ಪಲ್ಟಿ ಯಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕತ್ತರಿಘಟ್ಟ ಗೇಟ್ ಸಮೀಪ ನಡೆದಿದೆ.

ಬೆಂಗಳೂರಿನ ದೀಪನ್ವಿತ್ ಮೃತರು. ಧರ್ಮಸ್ಥಳದಿಂದ ಬೆಂಗಳೂ ರಿಗೆ ಹೋಗುತ್ತಿದ್ದಾಗ ಚಾಲಕ ಆನಂದ್ ಗುರು ಅವರು ವೇಗ ಹಾಗು ನಿರ್ಲಕ್ಷ್ಯದಿಂದ ಓಡಿಸಿದ ಪರಿಣಾಮ ರಸ್ತೆ ಪಕ್ಕದ ಮೈಲಿಗಲ್ಲಿಗೆ ಡಿಕ್ಕಿಯಾಗಿ ಕಾರು ನಾಲ್ಕು ಬಾರಿ ಪಲ್ಟಿಯಾ ಗಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ದೀಪನ್ವಿತ್ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಚಾಲಕನಿಗೆ ಗಾಯಗಳಾಗಿವೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮನೆ ಹೆಂಚು ಬದಲಿಸುವಾಗ ಬಿದ್ದು ವ್ಯಕ್ತಿ ಸಾವು

• ಪ್ರಜೋದಯ ವರದಿ

**ಅರಕಲಗೂಡು:** ಮನೆಯ ಹೆಂಚು ಬದಲಿಸುತ್ತಿದ್ದಾಗ ಕಾವಕೋಲು ಹಾಗು ಮರದ ಪಟ್ಟಿಗಳು ಮುರಿದು ವ್ಯಕ್ತಿ ಮೃತ ಪಟ್ಟಿರುವ ಘಟನೆ ತಾಲ್ಲೂಕಿನ ಕೊಡಕಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಅಂಚರ್ ಸ್ವಾಮಿಗೌಡ ಮೃತರು. ಏ.25ರಂದು ಅದೇ ಊರಿನ ಪುಟ್ಟೇಗೌಡ ಎಂಬುವವರ ಮನೆಯ ಹೆಂಚು ಬದಲಿಸುವ ಕೆಲಸಕ್ಕೆ ಹೋಗಿದ್ದಾಗ ಅವಘಡ ಸಂಭವಿಸಿದೆ. ಕಾವಕೋಲಿನ ಮೇಲೆ ಕುಳಿತು ಹಳೆಯ ಹೆಂಚು ಬದಲಿ ಸುತ್ತಿದ್ದಾಗ ಹಳೆಯದ್ದಾಗಿದ್ದ ಕಾವಕೋಲು ಹಾಗು ರಿಪೀಸ್ ಪಟ್ಟಿಗಳು ಮುರಿದು 8 ಅಡಿ ನೆಲಕ್ಕೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಏ.3ರಂದು ಸಾವನ್ನಪ್ಪಿದ್ದಾರೆ. ಅರಕಲಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಿರಿಯ ಕಾರ್ಮಿಕ ನಿರೀಕ್ಷಕರಿಗೆ ಬೀಳ್ಕೊಡುಗೆ



• ಪ್ರಜೋದಯ ವರದಿ

**ಬೇಲೂರು:** ಏಳೆಂಟು ವರ್ಷಗಳಿಂದ ತಾಲ್ಲೂಕಿನ ಹಿರಿಯ ಕಾರ್ಮಿಕ ನಿರೀಕ್ಷಕ ರಾಗಿ ಕರ್ತವ್ಯ ನಿರ್ವಹಿಸಿ ಇದೀಗ ಜಿಲ್ಲಾ ಕಾರ್ಮಿಕಾಧಿಕಾರಿ ಕಚೇರಿಗೆ ವರ್ಗಾ ವಣೆಯಾದ ವಿಜಯ್ ಕುಮಾರ್ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಪಟ್ಟಣದ ಹಳೇ ತಾಲ್ಲೂಕು ಕಚೇರಿ ಯಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಅರೇಹಳ್ಳಿ ಮಲೆನಾಡು ಕಟ್ಟಡ ಹಾಗು ಇತರೆ ನಿರ್ಮಾಣ ಕಾರ್ಮಿಕರ ಸಂಘ, ಜೊತೆಗೆ ವೇಲಾಪುರಿ ಮತ್ತು ದ್ವಾರಸಮುದ್ರ ಕಟ್ಟ ಡ ಕಾರ್ಮಿಕರ ಸಂಘದ ಮುಖಂಡರು ಸಂಯುಕ್ತವಾಗಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಜಯ್ ಕುಮಾರ್ ಅವರು, ಸಮಾಜದ ಮೂಲಸೌಕರ್ಯ ನಿರ್ಮಾಣದ ಬೆನ್ನೆಲುಬಾಗಿರುವ ಕಟ್ಟಡ ಹಾಗು ನಿರ್ಮಾಣ ಕಾರ್ಮಿಕರು ಬಹಳಷ್ಟು ಪರಿ ಶ್ರಮಪಟ್ಟು ಕೆಲಸ ಮಾಡುತ್ತಾರೆ. ಆದರೆ ಅವರಲ್ಲಿ ಹಲವರು ಅವಿದ್ಯಾವಂತರಾಗಿ ರುವುದರಿಂದ ಲೇಬರ್ ಕಾರ್ಡ್ ಸೇರಿ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಕಚೇರಿಗೆ ಬಂದಾಗ ಅವರಿಗೆ ಸಹಾನು ಭೂತಿಯಿಂದ ಸ್ಪಂದಿಸಬೇಕೆಂದು ನಾನು ಸಿಬ್ಬಂದಿಗೆ ತಿಳಿಸಿದ್ದೆ. ಸಿಬ್ಬಂದಿಗಳು ಅದನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆಂದು ಹೇಳಿದರು.

ಕಾರ್ಮಿಕ ಸಂಘಗಳ ಮುಖಂಡರಾದ ಮುಮ್ತಾಜ್, ವಿಜಯ್, ಸಲಾರ್ ಸರ್ದಾರ್, ಕುಮಾರ್, ಯೋಗೇಶ್, ವಿಜಯ್ ಅರೇಹಳ್ಳಿ, ಪ್ರತಾಪ್ ಉಪಸ್ಥಿತರಿದ್ದರು.

## ಬ್ಯಾಂಕಿಂಗ್ ಪರೀಕ್ಷಾ ತರಬೇತಿ ಪಡೆಯಲು ಸಲಹೆ




• ಪ್ರಜೋದಯ ವರದಿ

**ಹಾಸನ:** ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದರೆ ತರಬೇತಿಯ ಅವಶ್ಯಕತೆ ಹೆಚ್ಚಿದ್ದು ಜಿಲ್ಲೆಯಲ್ಲಿ ಉಚಿತವಾಗಿ ನೀಡುವ ತರಬೇತಿಯ ಸದುಪಯೋಗವನ್ನು ಅರ್ಹ ವಿದ್ಯಾರ್ಥಿಗಳು ಪಡೆಯಬೇಕೆಂದು ಕೃಷಿಕ್ ಸರ್ವೋದಯ ಫೌಂಡೇಶನ್ ಜಿಲ್ಲಾ ಕಾರ್ಯದರ್ಶಿ ಹೆಚ್.ಪಿ.ಮೋಹನ್ ಅವರು ಹೇಳಿದರು.

ನಗರದ ಕೃಷಿಕ್ ಸರ್ವೋದಯ ಫೌಂಡೇ ಶನ್ ಕಚೇರಿಯಲ್ಲಿ ಮಂಗಳವಾರ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ವಿದ್ಯಾ ರ್ಥಿಗಳಿಗೆ ಚೆಕ್ ವಿತರಿಸಿ ಮಾತನಾಡಿದ ಅವರು, ಮೊದಲು ಇಂಜಿನೀಯರಿಂಗ್ ವ್ಯಾಸಂಗ ಮಾಡಿದವರಿಗೆ ಉದ್ಯೋಗಾವ ಕಾಶಗಳು ಹೆಚ್ಚಿದ್ದವು. ಇತ್ತೀಚಿನ ದಿನಗಳಲ್ಲಿ ಇಂಜಿನೀಯರಿಂಗ್‌ಗೆ ಬೆಲೆ ಕಡಿಮೆಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಬ್ಯಾಂಕಿಂಗ್ ಪರೀಕ್ಷೆಗಳಿಗೆ ಆದ್ಯತೆ ನೀಡುತ್ತಿದ್ದಾರೆಂದರು.

ಬ್ಯಾಂಕ್‌ಗಳಲ್ಲಿ ಕರ್ನಾಟಕದ ಉದ್ಯೋಗಿ ಗಳ ಸಂಖ್ಯೆ ಕಡಿಮೆಯಿದೆ. ತಮಿಳುನಾಡು, ಆಂಧ್ರಪ್ರದೇಶ ಹಾಗು ಹಿಂದಿ ಭಾಷಿಕ ರಾಜ್ಯದ ಜನರೇ ಹೆಚ್ಚಾಗಿ ಕಾಣಿಸುತ್ತಾರೆ. ನಮ್ಮ ರಾಜ್ಯ ದವರು ಶ್ರಮದಿಂದ ಪರೀಕ್ಷೆ ಬರೆದು ಉದ್ಯೋಗ ಗಿಟ್ಟಿಸಿಕೊಳ್ಳಬೇಕು. ಆ ಉದ್ದೇಶದಿಂದಲೇ ಕೃಷಿಕ್ ಸರ್ವೋದಯ ಫೌಂಡೇಶನ್ ತರಬೇತಿ ನೀಡುತ್ತಿದೆ ಎಂದು ಹೇಳಿದರು.

ನಿವೃತ್ತ ಜಿಲ್ಲಾಧಿಕಾರಿ ಪುಟ್ಟಸ್ವಾಮಿಗೌಡ ಅವರು ಅನೇಕ ಅಧಿಕಾರಿಗಳನ್ನು ಒಳ ಗೊಂಡು ಗ್ರಾಮೀಣ ಭಾಗದ ವಿದ್ಯಾರ್ಥಿ ಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶ ದಿಂದ ಮೈಸೂರು, ಚಿಕ್ಕಮಗಳೂರು, ಕೊಡಗು ಜಿಲ್ಲೆಯಲ್ಲಿ ಫೌಂಡೇಶನ್ ಪ್ರಾರಂ ಭಿಸಿದರು. ಹಾಸನದಲ್ಲೂ ಈ ಸಂಸ್ಥೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆಂದು ತಿಳಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಮಂಜುನಾಥ್, ಬಿ.ಬೋರೇಗೌಡ, ಬಿ. ಕೆ.ಮಂಜುನಾಥ್, ಹೆಚ್.ಪಿ.ರಂಗಸ್ವಾಮಿ, ವೈ.ಎನ್.ಸುಬ್ಬುಸ್ವಾಮಿ, ಹೆಚ್.ಎಸ್. ವಿರೂಪಾಕ್ಷ, ಗಣೇಶ್, ಕೆಎಸ್‌ಎಫ್ ಶೈಕ್ಷಣಿಕ ಸಂಯೋಜಕ ಪ್ರಜ್ವಲ್ ಹಾಜರಿದ್ದರು.

### ಚ.ರಾ.ಪಟ್ಟಣದಲ್ಲಿ 112ನೇ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ

# ಪ್ರಶಸ್ತಿಗಳು ಮನುಷ್ಯನಿಗೆ ಅಹಂಕಾರ ತರಬಾರದು

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪ್ರಶಸ್ತಿಗಳು ಮನುಷ್ಯನಿಗೆ ಅಹಂಕಾರ ತರಬಾರದೆಂದು ನಿವೃತ್ತ ಪ್ರಾಧ್ಯಾಪಕ ಹೆಚ್.ಸಿದ್ದೇಗೌಡ ಅವರು ತಿಳಿಸಿದರು.

ಪಟ್ಟಣದ ಕರ್ನಾಟಕ ಸಂಘದ ಸಭಾಂಗಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ 112ನೇ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ ಮತ್ತು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ಹಾದಿಯ ಕುರಿತು ತಿಳಿಸಿದರು. ವಿದ್ಯಾರ್ಥಿಗಳಿಗೆ ಬರೀ ವೈದ್ಯಕೀಯ ಹಾಗೂ ಅಭಿ ಯಂತರ ವೃತ್ತಿ ಮಾತ್ರವಲ್ಲ ಇನ್ನೂ ವಿಶಾಲವಾದ ಅವ ಕಾಶಗಳು ಇದ್ದು ಅವನ್ನು ಬಳಸಿಕೊಳ್ಳಬೇಕು. ತಂದೆ-ತಾಯಿಗಳ ಶ್ರಮ ಹೆಚ್ಚು ಇರುತ್ತದೆ ವಿನಯವಂತಿಕೆ ಯನ್ನು ವಿದ್ಯಾರ್ಥಿಗಳು ಕಲಿಯಬೇಕು ಎಂದರು.

ಕಾರ್ಯಕ್ರಮದಲ್ಲಿ 2025-26ನೇ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ 125 ಅಂಕಗಳಿಗೆ 125 ಅಂಕಗಳನ್ನು ಪಡೆದ 31 ವಿದ್ಯಾರ್ಥಿ ಗಳು ಹಾಗೂ ಅತಿ ಹೆಚ್ಚು ಅಂಕ ಪಡೆದು ತಾಲ್ಲೂಕಿಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಸಾಹಿತ್ಯ ಪರಿಷತ್‌ನ ಪಾತ್ರ ಬಹುಮುಖ್ಯವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಅವರು ಅಭಿಪ್ರಾಯಪಟ್ಟರು.

ಪಟ್ಟಣದ ಕರ್ನಾಟಕ ಸಂಘದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಹಿಂದೆ ಗಂಭೀರವಾದ ಬೌದ್ಧಿಕ ಚರ್ಚೆಗಳು ಮತ್ತು ಸಾಂಸ್ಕೃತಿಕ ಚಿಂತನೆಗಳು ಇದ್ದವು. ಕನ್ನಡ ಭಾಷೆ ಯನ್ನು ಪರಿಷ್ಕರಿಸಿ, ಸಾಹಿತ್ಯವನ್ನು ಅಭಿ ವೃದ್ಧಿಪಡಿಸಿ, ಅಂದು ಸಮಾಜದ ನಾನಾ ಕ್ಷೇತ್ರಗಳಿಗೆ ಉಪಯುಕ್ತವಾಗುವಂತೆ ರೂಪಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು. ನಾಡು-ನುಡಿ ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಕಂಕಣಬದ್ಧವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಕನ್ನಡ ಸಾಹಿತ್ಯ ಪರಿಷತ್ತು ನಮ್ಮೆಲ್ಲರಿಗೆ ಏಕತೆ ಹಾಗೂ ಅಸ್ಮಿತೆಯ ಸಂಕೇತ. ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಅನೇಕ ಮಹನೀಯರು, ಹೋರಾಟಗಾರರು ಪರಿಷತ್ತಿನ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ. ಪರಿಷತ್ತು ಉದ ಯಕ್ಕೆ ಕಾರಣರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಬೇಕು ಎಂದರು.

ಕನ್ನಡ ಭಾಷೆ ಭವ್ಯ ಇತಿಹಾಸವನ್ನು ಹೊಂದಿದೆ. ಅದನ್ನು ಉಳಿಸಿ ಬೆಳೆಸಬೇಕಾದರೆ ಮಕ್ಕಳಲ್ಲಿ ಭಾಷಾ ಸಾಹಿತ್ಯವನ್ನು ಓದುವ ಆಸಕ್ತಿ ಬೆಳೆಸಬೇಕು. ಕನ್ನಡ ಸಾಹಿತ್ಯ ಪರಂಪರೆಯನ್ನು ಮುಂದಿನ ಸಮಾಜಕ್ಕೆ ನೀಡುವ ಗುರುತರ ಹೊಣೆ ವಿದ್ಯಾರ್ಥಿಗಳ ಮೇಲಿದೆ. ಪರಂಪರೆಯ ಬಗ್ಗೆ ಪುಸ್ತಕಗಳನ್ನು ಓದುವ ಮೂಲಕ ಭವಿಷ್ಯದ ಸಾಹಿತಿಗಳಾಗಿ ಬೆಳೆಯಬೇಕು. ಕನ್ನಡ ಭಾಷೆ ಬೆಳವಣಿಗೆಗೆ ಪ್ರತಿಯೊಬ್ಬರೂ ಶ್ರಮಿಸಬೇಕಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್.ಸತೀಶ್, ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಚ.ನಾ. ಅಶೋಕ್, ಕರ್ನಾಟಕ ಸಂಘದ ಅಧ್ಯಕ್ಷ ಆದಿಶೇಷಕುಮಾರ್, ಟಿಎಪಿ ಸಿಎಂಎಸ್ ಅಧ್ಯಕ್ಷ ಹೆಚ್. ಆರ್.ವೆಂಕಟೇಶ್ ಮೂರ್ತಿ, ನಿರ್ದೇಶಕ ಕುಂಬಾರಳ್ಳಿ ರಮೇಶ್, ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ ಶೆಟ್ಟಿಹಳ್ಳಿ, ಶಿಕ್ಷಣ ಸಂಯೋಜಕ ಶಿವಾನಂದ್, ಕೆಡಿಪಿ ಸದಸ್ಯ ಕಬ್ಬಾಳು ಮಹೇಶ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಮಲ್ಲೇಗೌಡ, ಕಾರ್ಯದರ್ಶಿ ಶಿವನಗೌಡ ಪಾಟೀಲ್, ಸಂಘಟನಾ ಕಾರ್ಯದರ್ಶಿ ಝುಬಿವುಲ್ಲಾ ಬೇಗ್, ಖಜಾಂಚಿ ಪ್ರಕಾಶ್ ಮಳ್ಳುಕೆರೆ, ಮಹಿಳಾ ಪದಾಧಿಕಾರಿಗಳಾದ ಪಿ.ಮಮತಾ, ರೂಪ ಸಂತೋಷ್, ಯಶೋಧ ನಾಗರಾಜ್ ಉಪಸ್ಥಿತರಿದ್ದರು.

## ಅರೇಹಳ್ಳಿಯಲ್ಲಿ ಮಿನಿ ಕ್ರಿಕೆಟ್ ಪಂದ್ಯಾವಳಿ ಯಶಸ್ವಿ



• ಪ್ರಜೋದಯ ವರದಿ

**ಅರೇಹಳ್ಳಿ:** ಪಟ್ಟಣದ ಸಂತೋಷ್ ನಗರದಲ್ಲಿ ಪ್ರಥಮ ಬಾರಿಗೆ ಸಂತೋಷ ನಗರ ಗೆಳೆಯರ ಬಳಗ ಹಾಗು ಹಿರಿಯ ನಾಗರಿಕರ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಲೀಗ್ ಮಾದರಿಯ ಮಿನಿ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಯಾಗಿ ನೆರವೇರಿತು.

ಎರಡು ದಿನಗಳ ಕಾಲ ನಡೆದ ಈ ಪಂದ್ಯಾವಳಿಯಲ್ಲಿ ಬೇಲೂರು ತಾಲ್ಲೂಕು ಸೇರಿ ಸಕಲೇಶ ಪುರ ಹಾಗು ಮೂಡಿ ಗೆರೆ ಭಾಗಗಳಿಂದ ಒಟ್ಟು 17 ತಂಡಗಳು ಭಾಗವಹಿಸಿ ಕ್ರೀಡಾ ಕೌಶಲ್ಯ ಪ್ರದರ್ಶನ ನೀಡಿದವು.

ಅಂತಿಮ ಪಂದ್ಯದಲ್ಲಿ ಬೇಲೂರು ತಾಲ್ಲೂಕಿನ ಉಂಬಳಗೋಡು ಗ್ರಾಮದ ಅರುಣೋದಯ ತಂಡ ಪ್ರಥಮ ಸ್ಥಾನ ಪಡೆದಿದೆ. ಭೀಮಾ ವಾರಿಯರ್ಸ್ ತಂಡ ದ್ವಿತೀಯ ಸ್ಥಾನ, ಮಲ್ನಾಡ್ ತಂಡ ತೃತೀಯ ಸ್ಥಾನ ಹಾಗು ಎಂ.ಸಿ.ಕೆ. ತಂಡ ನಾಲ್ಕನೇ ಸ್ಥಾನ ಪಡೆದುಕೊಂಡಿದೆ ಎಂದು ಪಂದ್ಯಾವಳಿಯ ವ್ಯವಸ್ಥಾಪಕ ಅಭಿಲಾಷ್ ಅವರು ಮಾಹಿತಿ ನೀಡಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK